ಬ
ದು
ಕು

## ಕಾವ್ಯ ರಶ್ಮಿ

– ಅಕ್ಷಯ ರಾಮ .ಕೆ
ಕಾವಿನಮೂಲೆ, ದ.ಕ.

ಹೆದ್ದಾರಿಯುದ್ದಗಲ ಅಂಗಡಿಯ ಸಾಲಿಹುದು
ಹಗಲು ಇರುಳೆನ್ನದೆಯೆ ನಡೆಯುತ್ತಿದೆ ಸಂತೆ
ಮುರುಕು ಅಂಗಡಿಯೆದುರು ಹೊದ್ದು ಮಲಗಿಹ ಜನಕೆ
ಇಹದ ಪರಿವೆಯೆ ಇಲ್ಲ, ಕಳೆದಿರಲು ಚಿಂತೆ.

ವಾಹನದ ಸಾಲುಗಳು ಬಿಡುವಿರದೆ ಸಾಗಿಹವು
ಒಳಗಿರುವ ಶ್ರೀಮಂತ ದೊರೆಗೆ ತಲೆನೋವು
ಸಕಲ ವೈಭವದೊಡನೆ ಮೆರೆಯುತಿಹ ಈತನಿಗೆ
ಹಣದ ಜೊತೆ ಜೊತೆಗಿಹುದು ಜೀವ ಭಯವು.

ದಿನಪೂರ್ತಿ ಮೈಮುರಿದು ದುಡಿದಿರುವ ಶ್ರಮಿಕನಿಗೆ
ಮೈಯ ಚಾಚಲು ಸಾಕು, ಅದುವೆ ಸ್ವರ್ಗ
ಬೀದಿ ಬದಿ ಒಂದಷ್ಟು ಜಾಗ ದೊರೆತರೆ ಸಾಕು
ಅಲ್ಲೆ ಬಿಚ್ಚುವನೀತ ಗಂಟುಮೂಟೆ.

ವ್ಯವಹಾರದೊತ್ತಡದ ಜಂಜಾಟ ಇವಗಿಲ್ಲ
ಅಂದು ಗಳಿಸಿದ ಕೂಳು ಅಂದಿಗಾಯ್ತು
ನಾಳೆಗೇನಿದೆಯೆಂಬ ಕೊರಗು ಮನದೊಳಗಿಲ್ಲ,
'ಹುಲ್ಲು ಮೇಯಿಸಲಾರ ಹುಟ್ಟಿಸಿದ ದೇವ'.

**ಇಸ್ರೋ ಎಂಬ**
**ನಮ್ಮ ಹೆಮ್ಮೆ**

2004 ರ ಸೆಪ್ಟೆಂಬರ್ 20 ರಂದು 'ಎಜುಸ್ಯಾಟ್' ಉಪಗ್ರಹವನ್ನು ಇಸ್ರೋ ಯಶಸ್ವಿಯಾಗಿ ಅಂತರಿಕ್ಷಕ್ಕೆ ಕಳುಹಿಸಿತು. 'ಎಜುಸ್ಯಾಟ್' ಶೈಕ್ಷಣಿಕ ಸೇವೆಗಳಿಗಾಗಿಯೇ ಮೀಸಲಾದ ಜಗತ್ತಿನ ಮೊಟ್ಟಮೊದಲ ಉಪಗ್ರಹ.

## ವಿಳಾಸ

ರಾಮಚಂದ್ರ ಹೆಗಡೆ ಸಿ.ಎಸ್, "ನೆನಪು" ನಂ.33,(172/3), 3ನೇ 'ಸಿ' ಅಡ್ಡರಸ್ತೆ,
ಕತ್ರಿಗುಪ್ಪಾ ಮುಖ್ಯರಸ್ತೆ, ವಿವೇಕಾನಂದನಗರ, ಬೆಂಗಳೂರು – 560 085.
ದೂರವಾಣಿ : 9986372503 Email:contact@chaitrarashmi.com,
Web: www.chaitrarashmi.com

Editor, Printer, Publisher and owned by RAMACHANDRA HEGDE C.S. , No.53, 2nd Floor, Shamsingh Complex, Gandhi Bazaar, Bangalore-560 004. Printed at : CHITRA PRINTERS, 193, Link Road, Malleswaram, Bangalore- 560 003.



RNI KAR KAN/2006/19109
MAG (3)/NPP/272/2005-06

ಸೃಜನಶೀಲತೆಯ ಹುಡುಕಾಟದಲ್ಲಿ....................

# ಚೈತ್ರರಶ್ಮಿ

ಕನ್ನಡ ಮಾಸಿಕ
ಅಕ್ಟೋಬರ್ ೨೦೦೮

- A RAY OF HOPE

## ಇಸ್ರೋ ಎಂಬ ನಮ್ಮ ಹೆಮ್ಮೆ




ಸಂಪುಟ: 5
ಸಂಚಿಕೆ: 1

ಸೃಜನಶೀಲತೆಯ ಹುಡುಕಾಟದಲ್ಲಿ.....

RNI KAR KAN/2006/19109
MAG (3)/NPP/272/2005-06

CHAITRA RASHMI
Kannada Monthly

ಚೈತ್ರರಶ್ಮಿ - A RAY OF HOPE

EDITOR: RAMACHANDRA HEGDE.C.S.

ಸಂಪಾದಕ: ರಾಮಚಂದ್ರ ಹೆಗಡೆ. ಸಿ.ಎಸ್.

ಸಂಪುಟ:5 | ಸಂಚಿಕೆ: 1 | ಅಕ್ಟೋಬರ್ 10, 2008 | ಪುಟ: 16 | ಬೆಲೆ: ರೂ. 5.00

Volume: 5 | Issue: 1 | October 10, 2008 | Pages: 16 | Rs. 5.00

# ಕಮಲಾ ಕೊಂಡದಕುಳಿಯವರ ಕವನ ಸಂಕಲನಗಳ ಬಿಡುಗಡೆ

'ಚೈತ್ರರಶ್ಮಿ ಬಳಗ'ದ ಬರಹಗಾರ್ತಿ, ಕವಯಿತ್ರಿ ಕಮಲಾ ಜಿ. ಹೆಗಡೆ ಕೊಂಡದಕುಳಿ ಅವರ ಮೊದಲ ಕವನ ಸಂಕಲನ 'ಪ್ರತೀಕ್ಷೆ', ಮಕ್ಕಳ ಕವನಗಳ ಸಂಕಲನ 'ಮುಗುಳು' ಇತ್ತೀಚೆಗೆ ಸಿದ್ಧಾಪುರದಲ್ಲಿ ನಡೆದ ಉತ್ತರಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಗೊಂಡವು. ಕುಮಟಾ ತಾಲ್ಲೂಕಿನ ಕಲ್ಲಬ್ಬೆಯಲ್ಲಿ ಗೃಹಿಣಿಯಾಗಿರುವ ಕಮಲಾ ಹೆಗಡೆ ಇನ್ನೂರಕ್ಕೂ ಹೆಚ್ಚು ಕವನಗಳು ಹಾಗೂ ಶಿಶುಗೀತೆಗಳನ್ನು ಬರೆದಿದ್ದಾರೆ. ಪ್ರಕೃತಿಯ ವಿಸ್ಮಯಗಳನ್ನು, ದೈನಂದಿನ ಬದುಕಿನ ಅನುಭವಗಳನ್ನು ಅತ್ಯಂತ ಸರಳವಾಗಿ ಅಷ್ಟೇ ಸ್ಪಷ್ಟವಾಗಿ



ಕಟ್ಟಿಕೊಡುವ ಕಮಲಾ ಹೆಗಡೆ ಚೊಚ್ಚಲ ಕೃತಿಯಲ್ಲಿಯೇ ತಮ್ಮ ಭಾಷಾ ಪ್ರೌಢಿಮೆ ಹಾಗೂ ಸೂಕ್ಷ್ಮ ಸಂವೇದನೆಯ ಲಯಗಾರಿಕೆಯಿಂದಾಗಿ ಗಮನ ಸೆಳೆಯುತ್ತಾರೆ. 'ಕಮಲಾ ಅವರ ಕವನಗಳಲ್ಲಿ ಸಹಜ ಲಯ ಹಾಗೂ ಚುರುಕಾದ ಚಿತ್ರಗಳು ದೊರಕುವುದರಿಂದ ಅವನ್ನು ಓದಿದಾಗ ಹರಿವ ನೀರಿನ ನಿರರ್ಗಳತೆಯ ಅನುಭವ ಉಂಟಾಗುತ್ತದೆ' ಎಂದು ಶ್ಲಾಘಿಸುತ್ತಾರೆ ಉತ್ತರ ಕನ್ನಡದ ಖ್ಯಾತ ಕಥೆಗಾರ, ಅಂಕಣಕಾರ ಶ್ರೀ ಶ್ರೀಧರ ಬಳಗಾರ ಅವರು. ಶ್ರೀ ಟಿ.ಜಿ.ಭಟ್ ಹಾಸಣಗಿ, ಪ್ರೊ॥ ವಿಷ್ಣು ಜೋಶಿ, ಡಾ॥ ಶ್ರೀಧರ ಉಪ್ಪಿನ ಗಣಪತಿ, ಶ್ರೀ ಬಿ.ಎ. ಸನದಿ ಇನ್ನೂ ಮುಂತಾದ ಉತ್ತರಕನ್ನಡ ಜಿಲ್ಲೆಯ ಹಿರಿಯ ಬರಹಗಾರರು ಕಮಲಾರ ಕವನಗಳ ಬಗ್ಗೆ ಮೆಚ್ಚುಗೆ ಸೂಚಿಸಿರುವರಲ್ಲದೆ ಆಕಾಶವಾಣಿಯಲ್ಲೂ ಇತ್ತೀಚೆಗೆ ಕಮಲಾ ಅವರ ಸಂದರ್ಶನ ಪ್ರಸಾರವಾಯಿತು. ಜೊತೆಗೆ ಕುಮಟಾದ ಡಿ.ಎಡ್ ಕಾಲೇಜಿನ ಸಭಾಭವನದಲ್ಲಿ ನಡೆದ ಕಮಲಾ ಹೆಗಡೆಯವರ ಮಕ್ಕಳ ಕವನ ಸಂಕಲನ 'ಮುಗುಳು' ಸಂಕಲನದಿಂದ ಆಯ್ದ ಗೀತೆಗಳ ಗಾಯನ 'ಕಾವ್ಯಸಿಂಚನ' ಕಾರ್ಯಕ್ರಮ ಸಾಹಿತ್ಯ ಹಾಗೂ ಸಂಗೀತ ಪ್ರೇಮಿಗಳ ಮನಗೆಲ್ಲುವಲ್ಲಿ ಯಶಸ್ವಿಯಾಯಿತು. ಈ ಮೆಚ್ಚುಗೆ ಪ್ರಶಂಸೆಗಳು ಈ ಗ್ರಾಮೀಣ ಪ್ರತಿಭಾವಂತ ಕವಯಿತ್ರಿಯ ಸಾಹಿತ್ಯ ಕೃಷಿಗೆ ಇನ್ನಷ್ಟು ಶಕ್ತಿ ತುಂಬಲಿ. ಅವರ ಸಾಹಿತ್ಯ ಪ್ರೀತಿ, ಬರವಣಿಗೆ ಇನ್ನಷ್ಟು ಶಕ್ತಿಯುತವೂ ಪ್ರಬುದ್ಧವೂ ಆಗಿ ಸಾಹಿತ್ಯ ಲೋಕಕ್ಕೆ ಉತ್ತಮ ಕೊಡುಗೆಯಾಗಲಿ ಎಂದು ಚೈತ್ರರಶ್ಮಿ ಮನತುಂಬಿ ಹಾರೈಸುತ್ತದೆ.





> ನಮ್ಮ ಗೋವುಗಳು ಆಹಾರದ ಆಸೆಯಲ್ಲಿ ಪ್ಲಾಸ್ಟಿಕ್ ತಿಂದು ಸಾವನ್ನಪ್ಪುತ್ತಿವೆ. ಈ ರೀತಿ ಸತ್ತ ಪ್ರಾಣಿಗಳ ಹೊಟ್ಟೆ ಬಗೆದಾಗ ಇಂಜೆಕ್ಷನ್ ಸೂಜಿಗಳು, ಸ್ಕ್ರೂ, ಮೊಳೆ, ಚಪ್ಪಲಿಗಳು ಕೆಜಿ ಗಟ್ಟಲೆ ಪ್ಲಾಸ್ಟಿಕ್ ಚೀಲಗಳು ದೊರೆತ ಉದಾಹರಣೆಗಳು ಬೇಕಾದಷ್ಟಿವೆ. ಇದು ಒಂದು ರೀತಿ ಪರೋಕ್ಷ ಗೋಹತ್ಯೆಯಾಗಿದೆ.

ಪ್ರಸಾದವಾಗಿ ದೊರೆಯುತ್ತವೆ. ಹಾಗೂ ಪರಿಸರದ ಜಾಗ/ಮನೆಗಳನ್ನು ಉಚಿತವಾಗಿ ಕೊಟ್ಟರೂ ಯಾರೂ ತೆಗೆದುಕೊಳ್ಳುವುದಿಲ್ಲ.

ಇವಕ್ಕೆಲ್ಲ ಒಂದೇ ಪರಿಹಾರ ಎಂದರೆ ಒಮ್ಮೆ ಉಪಯೋಗಿಸಿ ಬಿಸಾಡುವ (ಯೂಸ್ & ತ್ರೋ) ಪ್ಲಾಸ್ಟಿಕ್‌ನ್ನು ಸಂಪೂರ್ಣವಾಗಿ ನಿಷೇಧಿಸಬೇಕು. (ಈ ಬಗ್ಗೆ 2003ರಲ್ಲೇ ಉಡುಪಿಯ ಜಿಲ್ಲಾಧಿಕಾರಿಯವರಿಗೆ ಲಿಖಿತ ಮನವಿಯನ್ನು ಸಲ್ಲಿಸಿದ್ದೆ–ಲೇಖಕ). ಸರಕಾರ ಹಾಗೂ ಅಧಿಕಾರಿಗಳಿಂದ ಇದನ್ನು ನಿರೀಕ್ಷಿಸುವುದು ಮೂರ್ಖತನವಾದೀತು. ಇದಕ್ಕೆ ಪರಿಹಾರ ಪ್ರತಿಯೊಬ್ಬ ಪ್ರಜ್ಞಾವಂತ ನಾಗರೀಕನೂ ಮುಖ್ಯವಾಗಿ ಮಹಿಳೆಯರು ಕೆಲವು ದೃಢ ನಿರ್ಧಾರ ಕೈಗೊಳ್ಳುವುದರಲ್ಲಿದೆ.

* ಯಾವುದೇ ವಸ್ತುಗಳ ಖರೀದಿಗೆ ಹೋಗುವಾಗಲೂ ಮನೆಯಿಂದಲೇ ಚೀಲಗಳನ್ನು ಕೊಂಡೊಯ್ಯುವುದು. ವಸ್ತುಗಳನ್ನು ಸಾಧ್ಯವಾದಷ್ಟೂ ಪೇಪರ್‌ಗಳಲ್ಲಿ ಕಟ್ಟಿಸುವುದು. ಎಣ್ಣೆ ಮೊದಲಾದ ದ್ರವರೂಪದ ವಸ್ತುಗಳನ್ನು ಸ್ಟೀಲ್/ಗಾಜಿನ ಪಾತ್ರೆ ಕೊಂಡೊಯ್ಯುವುದು.
* ನಮ್ಮ ಮನೆ/ಸಂಘ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಊಟ/ಉಪಹಾರ ಹಾಗೂ ಪಾನೀಯಗಳಿಗಾಗಿ ಒಮ್ಮೆ ಉಪಯೋಗಿಸಿ ಬಿಸಾಡುವ ಪ್ಲಾಸ್ಟಿಕ್ ತಟ್ಟೆ/ಲೋಟಗಳನ್ನು ಬಳಸದಿರುವುದು.
* ಮಾರಾಟಗಾರರು ಪ್ಲಾಸ್ಟಿಕ್ ಚೀಲವನ್ನು ಸಾಮಾನಿನ ಜೊತೆ ಉಚಿತವಾಗಿ ನೀಡುವುದನ್ನು ನಿಲ್ಲಿಸಿದಲ್ಲಿ ಕ್ರಮೇಣ ಗ್ರಾಹಕರೂ ಬದಲಾಗುತ್ತಾರೆ. ಎಲ್ಲಾ ಕಲ್ಯಾಣ ಮಂಟಪಗಳಲ್ಲಿ ಪ್ಲಾಸ್ಟಿಕ್ ತಟ್ಟೆ/ಲೋಟಗಳ ಹಾಗೂ ಪ್ಲಾಸ್ಟಿಕ್‌ರೋಲ್‌ಗಳ ಉಪಯೋಗವನ್ನು ನಿಷೇಧಿಸುವುದು. ಇದರಿಂದ ತ್ಯಾಜ್ಯ ನಿರ್ವಹಣೆ ಹೆಚ್ಚು ಸುಲಭವಾಗುತ್ತದೆ. ದೇವಾಲಯಗಳಲ್ಲಿ ಪ್ರಸಾದ ವಿತರಣೆಗೆ ಕಾಗದ/ಬಟ್ಟೆಯ ಚೀಲಗಳನ್ನು ಉಪಯೋಗಿಸಬಹುದು. ಧಾರ್ಮಿಕ, ರಾಜಕೀಯ, ಸಾಂಸ್ಥಿಕ ಕಾರ್ಯಕ್ರಮಗಳಿಗಾಗಿ ಪ್ಲಾಸ್ಟಿಕ್‌ನ ತೋರಣಗಳನ್ನು ಹಾಗೂ ಧ್ವಜಗಳನ್ನು ಬಳಸದಿರುವುದು. ಕಾರ್ಯಕ್ರಮಾನಂತರ ಇವು ಚರಂಡಿಯಲ್ಲಿ ಹಾಗೂ ಕಸದ ರಾಶಿಗೆ ಬೀಳುವುದು ಪರೋಕ್ಷ ಅವಮಾನ ಕೂಡಾ. ಪ್ಲಾಸ್ಟಿಕ್‌ನ ರಾಷ್ಟ್ರಧ್ವಜ ಮಾದರಿಯನ್ನು ಉಪಯೋಗಿಸದಿರುವುದು.
* ರೋಟರಿ, ರೋಟರ್‍ಯಾಕ್ಸ್, ಜೇಸಿಸ್, ಲಯನ್ಸ್ ಹಾಗೂ ಇತರ ಸ್ವಯಂ ಸೇವಾ ಯುವಸಂಘಟನೆಗಳು ಸ್ವತಃ ತಮ್ಮಲ್ಲಿ ಈ ಎಲ್ಲಾ ಅಂಶಗಳನ್ನು ರೂಢಿಸಿಕೊಂಡು ಸಾರ್ವಜನಿಕರಿಗೂ ಮಾಹಿತಿ ನೀಡುವುದು.
* ತೀರಾ ಕ್ಷಣಿಕವಾದ ನಮ್ಮ ಕೆಲವು ಸ್ವಾರ್ಥಗಳಿಗಾಗಿ, ಶೋಕಿಗಾಗಿ ಉಪಯೋಗಿಸುವ ಈ ರೀತಿಯ ಪ್ಲಾಸ್ಟಿಕ್‌ಗಳ ಉಪಯೋಗವನ್ನು ನಮ್ಮ ಹಾಗೂ ಮುಂದಿನ ಜನಾಂಗದ ಸುಖ, ಸಮೃದ್ಧ, ನೆಮ್ಮದಿಯ ಜೀವನಕ್ಕಾಗಿ ತ್ಯಾಗ ಮಾಡುವುದೂ ಪುಣ್ಯದ ಕೆಲಸ ಅಂದುಕೊಳ್ಳೋಣ, ಏನಂತೀರಿ.

**'ಗತಿಯೇನು ಎನಗೆನುತ ಕೇಳ್ವವರೆ ಎಲ್ಲರುಂ**
**ಹಿತವೆಂತು ಜಗಕೆಂದು ಕೇಳುವವರಾರು ॥**
**ಮತಿಯ ವಿಶ್ವದಿ ಬೆರೆಸಿ ಜೀವಿತವ ವಿಸ್ತರಿಸೆ**
**ಪಥ ಮುಕ್ತಿಗಾಗಳೇ ಮಂಕುತಿಮ್ಮ ॥**

**–ಶ್ರೀಪತಿ ಆಚಾರ್ಯ, ಕುಂಭಾಶಿ, ಕುಂದಾಪುರ**

## ಅಮೃತಾ – ಇಸ್ರೋ ಗ್ರಾಮೀಣ ಸಂಪನ್ಮೂಲ ಕೇಂದ್ರ

ಇಸ್ರೋ ತನ್ನ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಾತಾ ಅಮೃತಾನಂದಮಯಿರವರ 'ಅಮೃತಾ ವಿಶ್ವವಿದ್ಯಾನಿಲಯ'ದ ಸಹಯೋಗದಲ್ಲಿ 'ಅಮೃತಾ– ಇಸ್ರೋ ಗ್ರಾಮೀಣ ಸಂಪನ್ಮೂಲ ಕೇಂದ್ರ' ವನ್ನು ಸ್ಥಾಪಿಸಿದೆ. ಇಸ್ರೋದ ತಂತ್ರಜ್ಞಾನದ ಮೂಲಕ ಸುನಾಮಿ ಪೀಡಿತ ನಾಗಪಟ್ಟಣಂ, ಸಾಯಿಕ್ಕಾಡ್ ಸೇರಿದಂತೆ ನೂರಾರು ಗ್ರಾಮಗಳಲ್ಲಿ ಅಮೃತಾ ವಿಶ್ವವಿದ್ಯಾನಿಲಯ ಅಭಿವೃದ್ಧಿ ಯೋಜನೆಗಳನ್ನು ನಡೆಸುತ್ತಿದೆ.

ಇಸ್ರೋ ಎಂಬ ನಮ್ಮ ಹೆಮ್ಮೆ

ಟೇಬಲ್ಲಿಗೆ ಹಾಸುವ ತೆಳುವಾದ ಹಾಳೆಗಳು, ಬಿಸ್ಕೆಟ್–ಚಾಕಲೇಟ್–ಶ್ಯಾಂಪು–ಗುಟ್ಕಾ–ಪಾನ್‌ಗಳ ರ್‍ಯಾಪರ್‌ಗಳು..... ಹೀಗೆ ಪಟ್ಟಿ ಅನಂತವಾಗಿದೆ.

ಇವುಗಳೆಲ್ಲ ಅಗತ್ಯದ ವಸ್ತುಗಳೇ ಆದರೂ ಪ್ಲಾಸ್ಟಿಕ್ ನಿಂದಲೇ ತಯಾರಿಸಬೇಕೆಂದಿಲ್ಲ, ಗಾಜಿನ ಸೀಸೆ, ಕಾಗದದ ಲಕೋಟೆ, ಸ್ಟೀಲ್ ಪಾತ್ರೆ ಇತ್ಯಾದಿ ಪರ್ಯಾಯ ಮಾರ್ಗಗಳಿವೆ. ಇವುಗಳ ನಿರ್ವಹಣೆಗೆ ಸಮಯ ಹೆಚ್ಚು ಬೇಕಾಗುತ್ತದೆ ನಿಜ. ಸಮಯದ ವಿಷಯದಲ್ಲಿ 'ಹಿಂದಿನಿಂದ ಆನೆ ಹೋದರೂ ಚಿಂತಿಲ್ಲ ಎದುರಿನಿಂದ ಇರುವೆ ಹೋಗಬಾರದು' ಎಂಬ ನಮ್ಮ ನಿಯಮವನ್ನು ಬದಲಾಯಿಸಿಕೊಳ್ಳಬೇಕು ಅಷ್ಟೇ.

ಹದಿನೈದು–ಇಪ್ಪತ್ತು ವರ್ಷಗಳ ಹಿಂದೆ ಅಂಗಡಿಗೆ ಹೋಗುವಾಗ ಚೀಲ ಕೊಂಡೊಯ್ಯುತ್ತಿದ್ದೆವು. ಈಗ ಸಂತೆಗೂ ಚೀಲ ಕೊಂಡೊಯ್ಯುವುದಿಲ್ಲ. ಹೂವು–ಹಣ್ಣು–ತರಕಾರಿ–ಅಕ್ಕಿ–ಬೇಳೆ–ಉಪ್ಪು ಹೀಗೆ ಒಂದೊಂದು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಸಿಕೊಂಡು ತರುತ್ತೇವೆ. ಹತ್ತು ಲೀಟರ್ ಹಾಲು ಬೇಕಾದರೂ ಮನೆಯಿಂದ ಚೀಲ/ಪಾತ್ರೆ ಒಯ್ಯುವ ಸೌಜನ್ಯ ನಮ್ಮಲ್ಲಿ ಇಲ್ಲವಾಗಿದೆ.

ಸಣ್ಣ ಚಹಾ ಅಂಗಡಿಯಿಂದ ಪ್ರಾರಂಭಿಸಿ ಪಂಚತಾರಾ ಹೋಟೇಲ್‌ಗಳಲ್ಲೂ ಪಾನೀಯಗಳನ್ನು ನೀಡಲು ಗಾಜು/ಸ್ಟೀಲ್ ಲೋಟಗಳ ಬದಲು ಒಮ್ಮೆ ಉಪಯೋಗಿಸಿ ಬಿಸಾಡುವ ಪ್ಲಾಸ್ಟಿಕ್ ಲೋಟಗಳೇ ವಿಜೃಂಭಿಸುತ್ತಿವೆ. ಊಟದ ಟೇಬಲ್‌ಗಳಿಗೆ ಹಾಸಲು ಕಡಿಮೆ ಬೆಲೆಯಲ್ಲಿ ಪೇಪರ್ ರೋಲ್‌ಗಳು ಲಭ್ಯವಿದ್ದರೂ ಪ್ಲಾಸ್ಟಿಕ್ ರೋಲನ್ನೇ ಬಳಸುತ್ತೇವೆ. ಇವುಗಳು ಇಪ್ಪತ್ತು ಮೈಕ್ರಾನ್‌ಗಿಂತ ದಪ್ಪವಿರುತ್ತದೆ ನಿಜ. ಆದರೆ ಇವುಗಳನ್ನು ಮರುಬಳಕೆಗೆ (ರಿಸೈಕಲ್) ಯಾರೂ ಕೊಡೋದಿಲ್ಲ. ಕೆಲವೊಂದು ರೀತಿಯ ಪ್ಲಾಸ್ಟಿಕ್‌ಗಳನ್ನು ಗುಜರಿಯಲ್ಲೂ ತೆಗೆದುಕೊಳ್ಳೋದಿಲ್ಲ. ಈ ವಸ್ತುಗಳನ್ನು ಉಪಯೋಗದ ನಂತರ ತೆಂಗಿನ ಕಟ್ಟೆಗೋ, ಪಕ್ಕದ ಮನೆಯ ಚರಂಡಿಗೋ, ರಸ್ತೆ ಬದಿಗೋ ಎಸೆದು ಬಿಡುತ್ತೇವೆ(ನಮ್ಮ ಮನೆ ಸ್ವಚ್ಛವಾಗಿರಬೇಕೆಂದು ನೆನಪಿರುತ್ತದೆ) ಇದರಿಂದಾಗಿ

* ಊರಿನ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆ.
* ಈ ಪ್ಲಾಸ್ಟಿಕ್‌ಗಳು ಮಣ್ಣಿನಲ್ಲಿ ಸೇರಿ ಅಂತರ್ಜಲದ ಸರಾಗ ಚಲನೆಗೆ ತಡೆಯಾಗುತ್ತದೆ. ತನ್ಮೂಲಕ ಬಾವಿ–ಕೆರೆಗಳಲ್ಲಿ ನೀರು ಬತ್ತಿ ಹೋಗುತ್ತವೆ.
* ಚರಂಡಿ/ಮೋರಿಗಳಲ್ಲಿ ಈ ಪ್ಲಾಸ್ಟಿಕ್ ತುಂಬಿಕೊಂಡು ನೀರಿನ ಸರಾಗ ಹರಿವಿಗೆ ತಡೆಯೊಡ್ಡಿ ಕ್ರಿಮಿ–ಕೀಟಗಳ ಉತ್ಪತ್ತಿಗೆ ಕಾರಣವಾಗಿ ಡೆಂಗ್ಯೂಜ್ವರ, ಮಲೇರಿಯಾ ರೋಗಗಳು ಬರಲು ಸಾಧ್ಯವಾಗುತ್ತವೆ ಮತ್ತು ಮಿಥೇನ್ ಅನಿಲಗಳು ಹೊರ ಹೋಗಲು ಅಡ್ಡಿಯಾಗಿ ಕೊಳವೆ ಸ್ಫೋಟಗೊಳ್ಳಲು ಕಾರಣವಾಗುತ್ತವೆ.
* ಮಣ್ಣಿಗೆ ಸೇರಿಕೊಂಡು ಸಸ್ಯಗಳ ಬೇರುಗಳ ಚಲನೆಗೆ ತಡೆಯುಂಟುಮಾಡುತ್ತವೆ.
* ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಚೀಲಗಳು ಹಾರಾಡುತ್ತಿರುವುದರಿಂದ ಜನ ಜೀವನಕ್ಕೆ ಅಗತ್ಯವಿರುವ ಆಮ್ಲಜನಕದ ಉತ್ಪಾದನೆಗೆ ಪೂರಕವು ಸಸ್ಯಗಳ ಬೆಳವಣಿಗೆಗೆ ಸಮಸ್ಯೆ ಉಂಟುಮಾಡುತ್ತದೆ. ಅದಲ್ಲದೆ ನಮ್ಮ ಗೋವುಗಳು ಆಹಾರದ ಆಸೆಯಲ್ಲಿ ಪ್ಲಾಸ್ಟಿಕ್ ತಿಂದು ಸಾವನ್ನಪ್ಪುತ್ತವೆ. ಈ ರೀತಿ ಸತ್ತ ಪ್ರಾಣಿಗಳ ಹೊಟ್ಟೆ ಬಗೆದಾಗ ಇಂಜೆಕ್ಷನ್ ಸೂಜಿಗಳು, ಸ್ಕ್ರೂ, ಮೊಳೆ, ಚಪ್ಪಲಿಗಳು ಕೆ.ಜಿ ಗಟ್ಟಲೆ ಪ್ಲಾಸ್ಟಿಕ್ ಚೀಲಗಳು ದೊರೆತ ಉದಾಹರಣೆಗಳು ಬೇಕಾದಷ್ಟಿವೆ. ಇದು ಒಂದು ರೀತಿ ಪರೋಕ್ಷ ಗೋಹತ್ಯೆಯಾಗಿದೆ.
* ನಮ್ಮ ಸುತ್ತಮುತ್ತಲಿನ ಯಾವುದೇ ಕಸದ ರಾಶಿಯನ್ನು ಗಮನಿಸಿದರೂ ಅದರಲ್ಲಿ ಕನಿಷ್ಠ ಶೇಕಡ 60 ರಷ್ಟು ಈ ರೀತಿಯ ಪ್ಲಾಸ್ಟಿಕ್‌ಗಳೇ ಇರುತ್ತವೆ. ರಸ್ತೆಗಳ ಅಕ್ಕಪಕ್ಕದಲ್ಲೂ ಇವುಗಳದೇ ತೋರಣದಂತಿರುತ್ತದೆ

ಗ್ರಾಮಪಂಚಾಯತ್‌ನಿಂದ ಹಿಡಿದು ಜಿಲ್ಲಾ ಆಡಳಿತದವರೆಗೂ ತ್ಯಾಜ್ಯ ನಿರ್ವಹಣೆ ಒಂದು ತಲೆನೋವಿನ ಸಮಸ್ಯೆಯಾಗಿದೆ. ಜನರ ವಿರೋಧದ ನಡುವೆಯೂ ಬೆಟ್ಟದಾಕಾರದಲ್ಲಿ ಸಂಗ್ರಹಿಸುವ ಈ ತ್ಯಾಜ್ಯಗಳಿಂದ ಮೈಲುದ್ದ ದವರೆಗೂ ದುರ್ಗಂಧ ವ್ಯಾಪಿಸಿರುವುದು ಮಾತ್ರವಲ್ಲದೇ ಪರಿಸರವಾಸಿಗಳಿಗೆ ಚಿತ್ರ ವಿಚಿತ್ರ ಸಾಂಕ್ರಾಮಿಕ ಕಾಯಿಲೆಗಳು

**ನಮ್ಮದು ವಿಶ್ವದಲ್ಲೇ ಕಡಿಮೆ ವೆಚ್ಚದ ಚಂದ್ರಯಾನ !!**

ಅಮೇರಿಕಾ ತನ್ನ ಚಂದ್ರಯಾನ ಕಾರ್ಯಕ್ರಮಕ್ಕೆ ಒಂದು ಬಿಲಿಯನ್ ಡಾಲರ್ ವ್ಯಯಿಸಿದ್ದರೆ ಭಾರತ ಇತ್ತೀಚೆಗೆ ನಡೆಸಿದ ಯಶಸ್ವಿ ಚಂದ್ರಯಾನ ಕಾರ್ಯಕ್ರಮಕ್ಕೆ ವೆಚ್ಚವಾಗಿದ್ದು 76 ಮಿಲಿಯನ್ ಡಾಲರ್. ಜಪಾನ್ 480 ಮಿಲಿಯನ್ ಡಾಲರ್ ಹಾಗೂ ಚೀನಾದ ಲೂನಾರ್ ಪ್ರೋಬ್ 180 ಮಿಲಿಯನ್ ಡಾಲರ್ ವೆಚ್ಚದ್ದಾಗಿದೆ.





# ಚಂದ್ರನ ಬೆಳಕಿನ ಪ್ರಭೆಗೆ 'ಇಸ್ರೊ'ದ ಇತರೆ ಯೋಜನೆಗಳು ಮಂಕಾಗದಿರಲಿ. . .

ಇಸ್ರೊ ಎಂಬ ನಮ್ಮ ಹೆಮ್ಮೆ



ಚಿತ್ರ ಕೃಪೆ : ಇಸ್ರೋ

**ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ತನ್ನ ಪ್ರಥಮ "ಚಂದ್ರಯಾನ"ದ ಮೂಲಕ ದೇಶವಾಸಿಗಳೆಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಆದರೆ ಇಸ್ರೋ ಎಂದರೆ ಕೇವಲ ಉಪಗ್ರಹ ಉಡಾವಣೆಯ ಸಂಸ್ಥೆಯಲ್ಲ. ಶಿಕ್ಷಣ, ಗ್ರಾಮವಿಕಾಸ, ಕೃಷಿ, ಆರೋಗ್ಯ, ಅಂತರ್ಜಲ ಅಭಿವೃದ್ಧಿ, ಹವಾಮಾನಕ್ಕೆ ಸಂಬಂಧಿಸಿದ ಹಲವು ಯೋಜನೆಗಳನ್ನು ಇಸ್ರೋ ನಿರ್ವಹಿಸುತ್ತಿದೆ. ಇಸ್ರೋದ ಅಂತಹ ಕೆಲವು ವಿಶಿಷ್ಟ ಯೋಜನೆಗಳ ಕುರಿತು ಬೆಳಕು ಚೆಲ್ಲಿದ್ದಾರೆ ಮಹೇಶ್ ಮಲ್ನಾಡ್.**

ಈಗೆಲ್ಲಾ ಚಂದ್ರಯಾನ ಕುರಿತು ಎಲ್ಲೆಡೆ ಮಾತುಕತೆ. ಕೆಲವರು ಭಾರತದ ಸಾಧನೆಗೆ ಹೆಮ್ಮೆ ಪಟ್ಟರೆ, ಮತ್ತೆ ಕೆಲವರು ಸುಮಾರು 364 ಕೋಟಿ ರೂಗಳನ್ನು ಅದರ ಮೇಲೆ ಸುರಿದು ಸಾಧಿಸಿದ್ದಾದರೂ ಏನು ಎಂದೆಲ್ಲಾ ಅನ್ನುವುದು ಕೇಳಿಬಂದಿದೆ. ಏನಾದರೂ, ಚಂದ್ರನನ್ನು ಮುಟ್ಟಿದ ಸಾಧನೆ

**"ಇಪ್ಪತ್ತು ವರ್ಷಗಳ ನಂತರ, ಅಂತರಿಕ್ಷ ಯಾನ ಇಂದಿನ ವಿಮಾನಯಾನದಷ್ಟೇ ಸಹಜವೂ, ಸುಲಭವೂ ಆಗಬಹುದಾದ ಸಂದರ್ಭದಲ್ಲಿ, ನಾವು 'ಬೇರೆ ದೇಶದವರ ಅಂತರಿಕ್ಷ ವಾಹನ'ದಲ್ಲಿ ನಮ್ಮ ಟಿಕೆಟ್ ಕಾಯ್ದಿರಿಸಲು ಬಯಸುವುದಿಲ್ಲ. ಹಾಗಾಗಿ ಭಾರತವನ್ನು ಬಾಹ್ಯಾಕಾಶ ಕ್ಷೇತ್ರದಲ್ಲಿ ಅದ್ವಿತೀಯವಾಗಿಸುವುದು ನಮ್ಮ ಗುರಿ"**

**– ಡಾ|| ಜಿ. ಮಾಧವನ್ ನಾಯರ್, ಇಸ್ರೋ ಅಧ್ಯಕ್ಷರು**

ಇಸ್ರೊ ಸಂಸ್ಥೆಯ ಸಾಧನೆಯ ಹಾದಿಯಲ್ಲಿ ಮಹತ್ವದ ಮೈಲಿಗಲ್ಲು ಎಂಬುದಂತೂ ನಿಜ. ಆದರೆ ಚಂದ್ರನ ಬೆಳಕಿನಡಿಯಲ್ಲಿ ಆ ಸಾಧನೆಯ ಸಂಭ್ರಮದಲ್ಲಿ ಅದರಷ್ಟೇ ಅಥವಾ ಅದಕ್ಕಿಂತ ಹೆಚ್ಚೆನಿಸುವ ಹತ್ತು ಹಲವು ಯೋಜನೆಗಳು ಕಾಲಕತ್ತಲೆಗೆ ಸರಿಯದಿರಲಿ, ಜನೋಪಯೋಗಿ ಕಾರ್ಯಕ್ರಮಗಳ ಸ್ಥೂಲ ಪರಿಚಯ ಅದರ ಮಹತ್ವದ ಅರಿವು ಎಲ್ಲರಿಗೂ ತಲುಪಲಿ ಎಂಬುದು ನಮ್ಮ ಉದ್ದೇಶ.

ಇಸ್ರೊ ಸಂಸ್ಥೆಯ ಸಂಶೋಧನಾ ಹಾಗೂ ಅಭಿವೃದ್ಧಿ ಕಾರ್ಯಗಳ ಜತೆಗೆ ವೈವಿಧ್ಯಮಯ ಯೋಜನೆಗಳತ್ತ ಸ್ವಲ್ಪ ಬೆಳಕು ಹರಿಸೋಣ. ರಾಷ್ಟ್ರದ ಅಭಿವೃದ್ಧಿಗೆ ಇನ್ಸ್ಯಾಟ್(INSAT) ಹಾಗೂ ದೂರಸಂವೇದಿ ಉಪಗ್ರಹ(IRS) ಗಳ ಕೊಡುಗೆ ಮಹತ್ವವಾದುದು. ಇವುಗಳ ಲಾಭಪಡೆದು ಹಲವಾರು ಯೋಜನೆಗಳು ಕಾರ್ಯಗತಗೊಂಡಿವೆ ಅವುಗಳಲ್ಲಿ ಪ್ರಮುಖವಾದವುಗಳತ್ತ ಗಮನ ಹರಿಸೋಣ.

**ಅವರು ಕೊಡಲಿಲ್ಲ, ಇವರು ಬಿಡಲಿಲ್ಲ!**

ಉಪಗ್ರಹ ಉಡಾವಣಾ ವಾಹನಗಳಲ್ಲಿ ಬಳಸುವ ಕ್ರಯೋಜೆನಿಕ್ ಇಂಜಿನ್‌ನ ಅಮೆರಿಕದ ಒತ್ತಡಕ್ಕೆ ಮಣಿದು ರಷ್ಯಾ ಭಾರತಕ್ಕೆ ನೀಡಲು ನಿರಾಕರಿಸಿತು. ಅಂತರಿಕ್ಷ ಯೋಜನೆಗಳಲ್ಲಿ ಭಾರತ ಬಲಾಢ್ಯವಾಗುವುದನ್ನು ತಡೆಯುವುದೇ ಅವರ ಉದ್ದೇಶವಾಗಿತ್ತು. ಆದರೆ ಇದರಿಂದ ಧೃತಿಗೆಡದ ಇಸ್ರೋ ತನ್ನದೇ ಆದ ಕ್ರಯೋಜೆನಿಕ್ ಇಂಜಿನ್‌ಗಳನ್ನು ದೇಶೀಯವಾಗಿ ಅಭಿವೃದ್ಧಿಪಡಿಸಿತು. ಆ ಮೂಲಕ ಭಾರತವನ್ನು ಅಂತರಿಕ್ಷದಲ್ಲಿ ನಿಯಂತ್ರಿಸಲು ಯತ್ನಿಸಿದ 'ದೊಡ್ಡಣ್ಣ' ಗಳಿಗೆ ದಿಟ್ಟ ಉತ್ತರ ನೀಡಿತು.

### * ಗ್ರಾಮೀಣ ಸಂಪನ್ಮೂಲ ಕೇಂದ್ರ (Village Resource Centres)

ದೂರಸಂಪರ್ಕ ಉಪಗ್ರಹಗಳಾದ ಇನ್ಸ್ಯಾಟ್ (INSAT) ಹಾಗೂ ದೂರಸಂವೇದಿ ಉಪಗ್ರಹ (IRS)ಗಳ ಲಾಭ ಪಡೆದು ಪ್ರಾರಂಭವಾದ ಯೋಜನೆಯೇ ಗ್ರಾಮೀಣ ಸಂಪನ್ಮೂಲ ಕೇಂದ್ರ (ವಿಆರ್‌ಸಿ). ಈ ಕೇಂದ್ರಗಳ ಮೂಲಕ ರೈತರಿಗೆ ಅಗತ್ಯವಾದ ಮಾಹಿತಿಗಳು ಸಿಗುತ್ತವೆ. ಮಣ್ಣಿನ ಫಲವತ್ತತೆ, ಹವಾಮಾನ ಮುನ್ಸೂಚನೆ (ಕಾರ್ಟೋಸ್ಯಾಟ್ ಇತ್ಯಾದಿ ನೆರವಿನಿಂದ), ಅಂತರ್ಜಲ ಮಾಹಿತಿ ಮುಂತಾದವುಗಳು ಸುಲಭವಾಗಿ ದೊರೆಯುತ್ತದೆ. ಮೀನುಗಾರರಿಗೆ ಸಮುದ್ರದ ಅಲೆಗಳ ಏರಿಳಿತ, ಬಿರುಗಾಳಿ ಮಾರುತಗಳ ಬೀಸುವಿಕೆ ಇತ್ಯಾದಿ ಮಾಹಿತಿಗಳು ಸಿಗುತ್ತವೆ.



ಡಾ|| ವಿಕ್ರಮ್ ಸಾರಾಭಾಯ್ : ಭಾರತೀಯ ಅಂತರಿಕ್ಷ ಯೋಜನೆಗಳ ಪಿತಾಮಹ

ಮೊಟ್ಟಮೊದಲು ವಿಆರ್‌ಸಿಯನ್ನು ತಮಿಳುನಾಡಿನಲ್ಲಿ 2004ರಲ್ಲಿ ಸ್ಥಾಪಿಸಲಾಯಿತು. ನಾಲ್ಕು ನೋಡಲ್ ಕೇಂದ್ರಗಳನ್ನು ವಿಸ್ಯಾಟ್ ಜಾಲದ ಮೂಲಕ ಹೆಣೆದು ಮಾಹಿತಿ ಹಂಚುವಿಕೆ, ಅಧ್ಯಯನ, ತಜ್ಞರೊಡನೆ ಸಂವಾದ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಾಧಿಸಲಾಯಿತು. ಈ ಮೂಲಕ ತಂತ್ರಜ್ಞಾನವನ್ನು ಭೂಮಿತಾಯಿಯ ಚೊಚ್ಚಲ ಮಗನ ಬಳಿಗೆ ಕೊಂಡೊಯ್ಯಲಾಯಿತು. ಈ ಯೋಜನೆಯ ಫಲಾನುಭವವನ್ನು ಹೆಚ್ಚಿನ ಜನರಿಗೆ ತಲುಪಿಸಲು ಐಟಿ ಕ್ಷೇತ್ರದ ಸಹಾಯ ಪಡೆದು ಹೆಚ್ಚೆಚ್ಚು ನೋಡಲ್ ಕೇಂದ್ರಗಳನ್ನು ಸ್ಥಾಪಿಸುವುದು, ವೈ-ಫೈ ಮೂಲಕ ಜಾಲ ವಿಸ್ತೀರ್ಣವನ್ನು ಹೆಚ್ಚಿಸುವುದು ಮುಂದಿನ ಉದ್ದೇಶ.

### * ಇನ್ಸ್ಯಾಟ್‌ನ ಇನ್ನಿತರ ಅನ್ವಯ ಯೋಜನೆಗಳು : ಎಜುಸ್ಯಾಟ್(edusat)

ಮೂರು ಹಂತದಲ್ಲಿ ಆರಂಭವಾದ ಈ ಯೋಜನೆ ಮುಖ್ಯವಾಗಿ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಗೆ ವ್ಯತಿರಿಕ್ತವಾದ ಉನ್ನತ ಗುಣಮಟ್ಟದ ಶಿಕ್ಷಣವನ್ನು ಶಾಲೆ, ಕಾಲೇಜಿನ ಮಕ್ಕಳಿಗೆ ನೀಡುವುದಾಗಿದೆ. ಇನ್‌ಸ್ಯಾಟ್3ಬಿ ಹಾರಿಸಿದ ನಂತರ ಕರ್ನಾಟಕ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿ ಈ ಯೋಜನೆಯು ಕಾರ್ಯಗತವಾಗಿದೆ. ರಾಜ್ಯದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಸುಮಾರು 100 ಇಂಜಿನಿಯರಿಂಗ್ ಕಾಲೇಜುಗಳು ಇಂದು ಎಜುಸ್ಯಾಟ್‌ನ ಜಾಲಕ್ಕೆ ಒಳಪಟ್ಟಿದೆ. ಮಹಾರಾಷ್ಟ್ರದಲ್ಲಿ 75 ಹಾಗೂ ಮಧ್ಯಪ್ರದೇಶದ 25 ಕೇಂದ್ರಗಳಲ್ಲೂ ಎಜುಸ್ಯಾಟ್ ಮೂಲಕ ಕಲಿಕೆ ಆರಂಭವಾಗಿದೆ. ರಾಜ್ಯದಲ್ಲಿ ಸರ್ವ ಶಿಕ್ಷಣ ಅಭಿಯಾನದ ಮೂಲಕ ಸುಮಾರು 885ಕ್ಕೂ ಅಧಿಕ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳನ್ನು ಎಜುಸ್ಯಾಟ್ ಯೋಜನೆಗೆ ಒಳಪಡಿಸಲಾಗಿದೆ.

### * ಎಜುಸ್ಯಾಟ್ ಹಾಗೂ ಟಿವಿ ವಾಹಿನಿ

ಯುಜಿಸಿ (University Grant Commission) ಹಾಗೂ ಇಗ್ನೋ (indira Gandhi open university) ಮೂಲಕ ದೂರದರ್ಶನದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಬಿತ್ತರಗೊಳ್ಳುತ್ತಿವೆ. ಜ್ಞಾನದರ್ಶನ– ಇಗ್ನೋ ಹಾಗೂ ಮಾನವ ಸಂಪನ್ಮೂಲ ಇಲಾಖೆ, ಪ್ರಸಾರಭಾರತಿಯ ಕೊಡುಗೆ. ಇದರಲ್ಲಿ ಸಾಮಾನ್ಯ ಜನರಿಂದ ಹಿಡಿದು ಐಐಟಿಯ ವಿದ್ಯಾರ್ಥಿಗಳವರೆಗೂ ತಂತ್ರಜ್ಞಾನ ವಿಷಯದ ಅರಿವು ಮೂಡಿಸಲಾಗುತ್ತಿದೆ.

ಇಸ್ರೋ ಎಂಬ ನಮ್ಮ ಹೆಮ್ಮೆ

"ಆರ್ಯಭಟ" ಭಾರತದ ಮೊದಲ ಉಪಗ್ರಹ. ಸೋವಿಯತ್‌ನ ಕಾಸ್ಮೋಸ್ –3M ಉಡಾವಣಾ ವಾಹನದ ಮೂಲಕ 1975 ರಲ್ಲಿ ಇದನ್ನು ಅಂತರಿಕ್ಷಕ್ಕೆ ಉಡಾವಣೆ ಮಾಡಲಾಯಿತು.





ಚಿಂತನ ರಶ್ಮಿ

# 'ಪ್ಲಾಸ್ಟಿಕ್' ಎಂಬ ಕಲಿಯುಗದ ರಾಕ್ಷಸ



**ಬದುಕಿನ ಪ್ರತೀ ಕ್ಷೇತ್ರಗಳಲ್ಲೂ ವ್ಯಾಪಿಸಿರುವ ಈ ಪ್ಲಾಸ್ಟಿಕ್ ಎಂಬ ರಕ್ಕಸ ಎಷ್ಟು ಜನಭಾಜನವಾಗಿದೆಯೋ ಇದರ ಗೋಮುಖದ ಹಿಂದಿರುಗುವ ವ್ಯಾಘ್ರಮುಖ ಬೇರೆಯೇ ಇದೆ ಎನ್ನುತ್ತಾರೆ**

**ಶ್ರೀಪತಿ ಆಚಾರ್ಯ, ಕುಂದಾಪುರ.**

ಅತೀ ವೇಗದಿಂದ ಓಡುತ್ತಿರುವ ಈ ಕಾಲಘಟ್ಟದಲ್ಲಿ ಮಾನವ ನಿರ್ಮಿತ ವಸ್ತುವೊಂದು 'ಕ್ರಾಂತಿ'ಯನ್ನೇ ಉಂಟುಮಾಡುತ್ತಿದೆ. ಇದರಿಂದ ಎಷ್ಟೊಂದು ಪ್ರಯೋಜನವಿದೆಯೆಂದು ಹಾಗೆಯೇ ಮನುಷ್ಯನೂ ಸೇರಿದಂತೆ ಸಕಲ ಜೀವಕೋಟಿಯ ವಿನಾಶಕ್ಕೂ ಇದು ಹೇತುವಾದೀತೆಂದು ಇದನ್ನು ಕಂಡುಹಿಡಿದಾತ ಕಲ್ಪನೆ ಕೂಡಾ ಮಾಡಿರಲಿಕ್ಕಿಲ್ಲ. ಇಷ್ಟಕ್ಕೂ ಆ ವಸ್ತು ಯಾವುದು ಗೊತ್ತಾ? ಪ್ಲಾಸ್ಟಿಕ್! ಮುಂಜಾನೆದ್ದು ಹಲ್ಲುಜ್ಜುವ ಬ್ರಷ್‌ನಿಂದಾರಂಭಿಸಿ, ನಿತ್ಯೋಪಯೋಗಿ ವಸ್ತುಗಳೆಲ್ಲಾ ತಾನೇ ಆಗಿ ಕೊನೆಗೆ ರಾತ್ರಿ ಮಲಗುವ ಚಾಪೆಯನ್ನು ತನ್ನಿಂದಲೇ ತಯಾರಿಸುತ್ತಾರೆಂದು ಹೆಮ್ಮೆಪಡುವ ಪ್ಲಾಸ್ಟಿಕ್!

**ಸ್ಥಾಪನೆ ಮತ್ತು ತಯಾರಿಕಾ ವ್ಯಾಪ್ತಿ:**

'ಇಂಡಿಯನ್ ಪೆಟ್ರೋಕೆಮಿಕಲ್ಸ್ ಕಾರ್ಪೋರೇಷನ್' ಬರೋಡಾದಲ್ಲಿ ಪ್ರಥಮ ನ್ಯಾಫ್ತಾಕ್ರ್ಯಾಕರ್ ಘಟಕವೊಂದನ್ನು ಸ್ಥಾಪಿಸುವುದರೊಂದಿಗೆ ಭಾರತದಲ್ಲಿ ಪ್ಲಾಸ್ಟಿಕ್ ಉತ್ಪಾದನಾ ಉದ್ಯಮಗಳು ಪ್ರಾರಂಭಗೊಂಡವು. ಇಂದು ಅಂಥಹ ಐವತ್ತಕ್ಕೂ ಹೆಚ್ಚು ಘಟಕಗಳು ಭಾರತದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇವುಗಳ ಬೆಳವಣಿಗೆಯ ವೇಗ ಕಳೆದ ಐದು ವರ್ಷದಲ್ಲಿ ಶೇಕಡ 170 ಕ್ಕೂ ಹೆಚ್ಚು. 'ವಿಶ್ವ ಆರೋಗ್ಯ ಮತ್ತು ಪ್ಲಾಸ್ಟಿಕ್ ಬಳಕೆ' ಎಂಬ ಅಂತರಾಷ್ಟ್ರೀಯ ವರದಿಯ ಪ್ರಕಾರ ಭಾರತದಲ್ಲಿ ಸುಮಾರು ಎರಡು ಸಹಸ್ರ ಸಣ್ಣ ಪ್ಲಾಸ್ಟಿಕ್ ಘಟಕಗಳು ಪ್ರತೀ ವರ್ಷ ಸುಮಾರು 30 ಸಹಸ್ರ ಟನ್ ಪ್ಲಾಸ್ಟಿಕ್ ಚೀಲ ಉತ್ಪಾದಿಸುತ್ತಿವೆ. ಪ್ರತಿ ವ್ಯಕ್ತಿ ತಲಾ 1.8 ಕೆ.ಜಿ ಪ್ಲಾಸ್ಟಿಕ್ ಬಳಸುತ್ತಿದ್ದಾನೆ. ಕೇವಲ ದೆಹಲಿಯಲ್ಲಿಯೇ ಸುಮಾರು 5 ಸಹಸ್ರ ಪ್ಲಾಸ್ಟಿಕ್ ಚೀಲಗಳನ್ನು ಉತ್ಪಾದಿಸುವ ಘಟಕಗಳಿವೆ. ಇಡೀ ವಿಶ್ವದಲ್ಲಿ ಅತೀ ಹೆಚ್ಚು ಪ್ಲಾಸ್ಟಿಕ್ ಬಳಸುವ ದೇಶ ಭಾರತ! ಮುಂದುವರಿದ ದೇಶಗಳು ತಮ್ಮ ದೇಶದಲ್ಲಿ ಪ್ಲಾಸ್ಟಿಕ್‌ಗೆ ನಿಷೇಧ ಹೇರಿ ತೃತೀಯ ಜಗತ್ತಿನ ರಾಷ್ಟ್ರಗಳಿಗೆ ರಫ್ತು ಮಾಡುತ್ತಿವೆ. ಇವುಗಳನ್ನು ಪಡೆದುಕೊಳ್ಳುವಲ್ಲಿ ಭಾರತವು ಮುಂದಿದೆ.

* ವಿಶೇಷ ತಂತ್ರಜ್ಞಾನ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ಉಪಯೋಗಿಸುವ ಪ್ಲಾಸ್ಟಿಕ್ ಗೋಮುಖವಾದರೆ, ನಿತ್ಯ ಜೀವನಕ್ಕೆ ಉಪಯೋಗಿಸುವ – ಒಮ್ಮೆ ಉಪಯೋಗಿಸಿ ಬಿಸಾಡುವ ಪ್ಲಾಸ್ಟಿಕ್ ಇದೆಯಲ್ಲಾ ಇದು ವ್ಯಾಘ್ರಮುಖ. ಹಾಲಿನ ಪ್ಯಾಕೆಟ್, ಕ್ಯಾರಿಬ್ಯಾಗುಗಳು, ಜಿನಸು ಸಾಮಾಗ್ರಿಗಳನ್ನು ಕಟ್ಟುವ ಲಕೋಟೆಗಳು (ಇತ್ತೀಚೆಗೆ ಎಣ್ಣೆಯಂತಹ ದ್ರವ ಪದಾರ್ಥಗಳನ್ನೂ, ಸಾರು, ಸಾಂಬಾರು, ಹಾಲುಗಳನ್ನು ಇದರಲ್ಲೇ ಕಟ್ಟಿ ಕೊಡಲಾಗುತ್ತದೆ), ದೇವಸ್ಥಾನಗಳಲ್ಲಿ ಪ್ರಸಾದ, ಹಣ್ಣು, ಕಾಯಿ ಕೊಡುವ ಚೀಲಗಳು, ಸಮಾರಂಭಗಳಿಗೆ ಸಿಹಿತಿಂಡಿ ಕಟ್ಟುವ ಚೀಲಗಳು, ನೀರು/ಪಾನೀಯ ಕುಡಿಯಲು ಉಪಯೋಗಿಸುವ ಲೋಟಗಳು, ಊಟದ

**ಭಾರತ ತನ್ನದೇ ರಾಕೆಟ್ ಮೂಲಕ (SLV-3) ಉಡಾಯಿಸಿದ ಮೊಟ್ಟ ಮೊದಲ ಉಪಗ್ರಹ ರೋಹಿಣಿ – 1B. ಇದನ್ನು 1980ರ ಜುಲೈ 18 ರಂದು ಉಡಾವಣೆ ಮಾಡಲಾಗಿತ್ತು. ಮೊದಲ ಬಾರಿ ವಿಫಲವಾದ ಇದನ್ನು 1981 ರ ಮೇ 20 ರಂದು ಯಶಸ್ವಿಯಾಗಿ ಅಂತರಿಕ್ಷಕ್ಕೆ ಕಳುಹಿಸಲಾಯಿತು.**

ಇಸ್ರೋ ಎಂಬ ನಮ್ಮ ಹೆಮ್ಮೆ

# ಶಾಲ್ಮಲಿ

– ಮನಸ್ವಿನಿ, ಬೆಂಗಳೂರು

**ಪ್ರೀತಿಯ ಸಾಧನಾ,**

ಹೇಗಿದ್ದಿಯಾ? ನಾನಿಲ್ಲಿ ಆರಾಮವಾಗಿದ್ದೇನೆ. ನಿಂಗೆ ಪತ್ರ ಬರಿದೆ ಇದ್ದುದಕ್ಕೆ ಸಾರಿ. ಪಾಪು ನೋಡ್ಕೊಳೊದ್ರಲ್ಲೆ ಸಮಯ ಆಗಿ ಹೋಗುತ್ತೆ.

ನಿಂಗೆ ಗೊತ್ತಲ್ಲ, ಜೀವನ್ ಕಥೆ. 2–3 ತಿಂಗಳಿಂದ ಮನೆಗೆ ಬಂದಿರ್ಲಿಲ್ಲ. ನನ್ನ ಜೀವನದಲ್ಲಿ ಎಲ್ಲ ಮುಗಿದು ಹೋಯ್ತು ಅಂತ ಅಳೋದು ಒಂದೆ ಆಗಿತ್ತು. ಮನೆಲಿ ಯಾರು ಮಾತೆ ಆಡ್ತಿರ್ಲಿಲ್ಲ. ಸ್ಮಶಾನ ಮೌನ, ನಾನಂತು ಹಾಸಿಗೆ ಮೇಲೆ, ಚಾದರದ ಒಳಗೆ ಲೋಕ ಮಾಡ್ಕೊಂಡು ಅಳೋದನ್ನ ಆಸ್ತಿ ಮಾಡ್ಕೊಂಡಿದ್ದೆ. ಅಲ್ಲಿ ಇಲ್ಲಿ ಸ್ವಲ್ಪ ಧೈರ್ಯ ಮಾಡಿ ಜೀವನ ನಡಿತಿತ್ತು ಅದರ ಪಾಡಿಗೆ ಅದು. ಒಂದು ದಿನ ಮಾವ ಬಂದು ನನ್ನ ಮುಂದೆ ಗೋಳೊ ಅಂತ ಅತ್ರು. 'ಶಾಲು, ನಿನ್ನ ಜೀವನ ಅಮಾವಾಸ್ಯೆ ಆಗಿ ಹೋಯ್ತಲ್ಲ, ನನ್ನ ಮಗ ಬೇಕಾಬಿಟ್ಟಿ ಏನೇನೊ ಅಭ್ಯಾಸ ಮಾಡ್ಕೊಂಡ' ಅಂದ್ರು. ಅದೆಲ್ಲಿ ಧೈರ್ಯ ಬಂತೊ ಗೊತ್ತಿಲ್ಲ ಸಾಧು, ಪಾಪುನ ಕರ್ಕೊಂಡು ಬಂದು, ಅವರ ಕೈಯಲ್ಲಿ ಹಾಕಿ, ಮಾವ, 'ಪೂರ್ಣಚಂದ್ರ ಇದ್ದಾಗ ಅಮವಾಸ್ಯೆ ಎಲ್ಲಿ' ಅಂದೆ. 'ಮಾವ, ನಾವು ಜೀವನಾನ ಇಷ್ಟೇನಾ ಕಂಡಿರೋದು.... ಬದುಕಬೇಕು, ನಮ್ಮ ಆದ್ಯತೆಗಳನ್ನು ನಾವೇ ಮಾಡ್ಕೊಬೇಕು' ಅಂದೆ. ಅವ್ರು ಅದಕ್ಕೆ, 'ನಂದೇನಿದೆ!! 60 ಆಯ್ತಲ್ಲ.... ಅರಳು ಮರಳು' ಅಂದ್ರು. ನಾನು '60–ಅರಳು, ಮರಳು ಅಲ್ಲ... 60ಕ್ಕೆ ಮರಳಿ ಅರಳು' ಅಂದೆ. 'ಏನಿದು, ನನ್ನ ಮಗಳು ಇವತ್ತು ಬುದ್ಧಿವಂತೆ ಆಗಿದ್ದಾಳೆ' ಅಂದ್ರು. ನಾನು 'ನಮ್ಮ ಬೇಂದ್ರೆ ಮಾಸ್ತರ್ದು' ಅಂದೆ. ಅವತ್ತಿಂದ ನಾವು ಹೊಸ ಜೀವನ ಶುರು ಮಾಡಿದ್ದೀವಿ.

ಮಾವ ಮತ್ತೆ ಕೆಲ್ಸಕ್ಕೆ ಸೇರಿಕೊಂಡಿದ್ದಾರೆ. ಅತ್ತೆ ಸುಧಾರಿಸಿ ಕೊಂಡಿದ್ದಾರೆ. ನಾನು ಕೆಲ್ಸಕ್ಕೆ ಹೋಗ್ತಿದ್ದೀನಿ. ಮಾವಯ್ಯಂಗೆ ಬೇಂದ್ರೆ ಮಾಸ್ತರ ಹುಚ್ಚು ಈಗ. ಮೊನ್ನೆ 'ನಾಕುತಂತಿ' ಪುಸ್ತಕ ತಂದು ಕೊಟ್ಟೆ. ತುಂಬಾ ಅತ್ರು. ನೀನೆ ನನ್ನ ಮಗ ಅಂತ.

ಹೇಗಿದ್ದಾರೆ ನಿಮ್ಮ ಮನೆಯವ್ರು? ಇನ್ನ ಹರುಕು ಮುರುಕು ಕನ್ನಡ ಮಾತಾಡ್ತಾರ? ಸರಿಯಾಗಿ ಕಲ್ಸು ಅವ್ರಿಗೆ. ಊರಿಗೆ ಬಾ ಮಾರಾಯ್ತಿ. ಪತ್ರ ಬರಿ.

ಸರಿ ಸರಿ, ನನ್ನ ಹಾಡು ಬರ್ತಾ ಇದೆ ರೇಡಿಯೋದಲ್ಲಿ, 'ಬೇಂದ್ರೆ ಮಾಸ್ತರ್ದು'. ಸಿಗ್ತೀನಿ ಟಾಟಾ.

– **ಶಾಲು**

**ಕಡಿಮೆ ಉಡಾವಣಾ ವೆಚ್ಚದಲ್ಲಿ ಫಸ್ಟ್, ಗುಣಮಟ್ಟದಲ್ಲಿ ಬೆಸ್ಟ್ !!**

'ಅನ್ಯದೇಶೀಯ ಉಪಗ್ರಹ ಉಡಾವಣಾ ಉದ್ಯಮ'ದಲ್ಲಿ ಭಾರತ ಇದೀಗ ಅಮೆರಿಕ, ರಷ್ಯಾ, ಉಕ್ರೇನ್, ಯೂರೋಪಿಯನ್ ಸ್ಪೇಸ್ ಏಜೆನ್ಸಿಗಳ ಸಾಲಿನಲ್ಲಿದ್ದು ವಾರ್ಷಿಕ 1.5 ಬಿಲಿಯನ್ ಡಾಲರ್ ವಹಿವಾಟು ನಡೆಸುತ್ತಿದೆ. ಅಷ್ಟೇ ಅಲ್ಲದೆ ಇತರ ನಾಲ್ಕು ದೇಶಗಳಿಗಿಂತ ಶೇಕಡಾ 30 ರಿಂದ 35 ರಷ್ಟು ಕಡಿಮೆ ವೆಚ್ಚದಲ್ಲಿ ಉಪಗ್ರಹಗಳ ಉಡಾವಣಾ ಸಾಮರ್ಥ್ಯ ಹೊಂದಿದೆ. ಇಸ್ರೇಲ್‌ನ 'ಟೆಕ್‌ಸಾರ್' ಉಪಗ್ರಹ, ಟಾವೆಕ್ಸ್–2, ಇಂಡೋನೇಶಿಯನ್ ಉಪಗ್ರಹ ಸೇರಿದಂತೆ ಹಲವು ದೇಶಗಳ ಉಪಗ್ರಹಗಳನ್ನು ಇಸ್ರೋ ಅಂತರಿಕ್ಷಕ್ಕೆ ಕಳುಹಿಸಿದೆ.

ಇಸ್ರೋ ಎಂಬ ನಮ್ಮ ಹೆಮ್ಮೆ





*** ಉಪಗ್ರಹ ಆಧಾರಿತ ತರಬೇತಿ ಮತ್ತು ಅಭಿವೃದ್ಧಿ ಸಂವಹನ ವಾಹಿನಿ (TDCC)**

ದೃಶ್ಯ ಹಾಗೂ ಶ್ರವ್ಯ ಮಾಧ್ಯಮದ ಉಪಯುಕ್ತತೆಯನ್ನು ಸಮರ್ಥವಾಗಿ ಬಳಸಿಕೊಂಡ ಯೋಜನೆ. ದೇಶದಾದ್ಯಂತ ಇರುವ 2 ಸಾವಿರಕ್ಕೂ ಅಧಿಕ ತರಗತಿಗಳಲ್ಲಿ, ಕರ್ನಾಟಕ, ಗುಜರಾತ್, ಮಧ್ಯಪ್ರದೇಶ, ಒರಿಸ್ಸಾ ಹಾಗೂ ಗೋವಾ ವಿಶ್ವವಿದ್ಯಾಲಯಗಳ ಕೇಂದ್ರಗಳಲ್ಲಿ ಉಪನ್ಯಾಸಗಳನ್ನು ಆಲಿಸಿಕೊಳ್ಳಲು ಹಾಗೂ ಶಿಕ್ಷಕರೊಡನೆ ಸಂಪರ್ಕ ಹೊಂದಿ, ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ದೂರಶಿಕ್ಷಣ, ಗ್ರಾಮೀಣಾಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳಿಗೆ ಈ ಯೋಜನೆಯನ್ನು ಅಳವಡಿಸಲಾಗಿದೆ. ಪಂಚಾಯತ್ ರಾಜ್ ಹಾಗೂ ಶಿಶಿಕ್ಷು ತರಬೇತಿಗಳು ಇದರ ಲಾಭ ಪಡೆದಿವೆ.

*** ಗ್ರಾಮ್ ಸ್ಯಾಟ್**



ನಗರ ಪ್ರದೇಶದಿಂದ ದೂರದ ಗ್ರಾಮಗಳಿಗೆ ಟೆಲಿಮೆಡಿಸಿನ್, ದೂರದರ್ಶನ, ಇ–ಗವರ್ನೆನ್ಸ್ ಮುಂತಾದ ಸಂವಹನ ಕಾರ್ಯಕ್ರಮಗಳ ಯೋಜನೆ ಇದಾಗಿದೆ. ಟೆಲಿ ಮೆಡಿಸಿನ್ ದೂರದ ಹಳ್ಳಿಯಲ್ಲಿನ ಪ್ರಾಥಮಿಕ ಸಂಪರ್ಕ ಕೇಂದ್ರಕ್ಕೂ ನಗರ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೂ ನೇರ ಸಂಪರ್ಕ ಸಾಧಿಸುವ ಪ್ರಯತ್ನ. 2001ರಿಂದ ಈಚೆಗೆ ಸುಮಾರು 100 ಆಸ್ಪತ್ರೆಗಳ ಜತೆಗೆ 78 ಗ್ರಾಮೀಣ ಭಾಗದ ಚಿಕಿತ್ಸಾ ಕೇಂದ್ರದೊಡನೆ ಸಂಪರ್ಕ ಸಾಧಿಸಲಾಗಿದೆ. ಇದರಲ್ಲಿ ಜಮ್ಮು ಕಾಶ್ಮೀರದ ಲೇಹ್ ಹಾಗೂ ಕಾರ್ಗಿಲ್ ನಂತಹ ದುರ್ಗಮ ಪ್ರದೇಶದ ಚಿಕಿತ್ಸಾ ಕೇಂದ್ರಗಳು ಸೇರಿವೆ. ಲಕ್ಷದ್ವೀಪ, ಅಂಡಮಾನ್ ಮುಂತಾದ ಕೇಂದ್ರಾಡಳಿತ ಪ್ರದೇಶಗಳಿಗೆ ಅಪೊಲೊ, ಅಮೃತಾ, ಐಐಎಂಎಸ್ ಮುಂತಾದ ಹೆಸರಾಂತ ಮೆಡಿಕಲ್ ವಿದ್ಯಾಲಯಗಳ ಸೇವೆ ಲಭ್ಯವಾಗಿದೆ. ಈಶಾನ್ಯ ರಾಜ್ಯಗಳಲ್ಲಿ 11 ಆಸ್ಪತ್ರೆಗಳು, ಕೋಲ್ಕತ್ತಾ, ಮಹಾರಾಷ್ಟ್ರದ ಹಳ್ಳಿಗಳ ಕೇಂದ್ರಗಳು ಸೇರಿವೆ. ಅಲ್ಲದೆ ಕರ್ನಾಟಕದ 11 ಜಿಲ್ಲಾ ಕೇಂದ್ರಗಳು ಬೆಂಗಳೂರಿನ ಸೂಪರ್ ಸ್ಪೆಷಾಲಿಟಿ ಆಸ್ಪತೆಗಳೊಡನೆ ಸಂಪರ್ಕ ಹೊಂದಿವೆ. ಈವರೆಗೂ ಸುಮಾರು 25 ಸಾವಿರಕ್ಕೂ ಅಧಿಕ ರೋಗಿಗಳಿಗೆ ಟೆಲಿ ಮೆಡಿಸಿನ್ ಮೂಲಕ ಚಿಕಿತ್ಸೆ ನೀಡಲಾಗಿದೆ.

*** ಆಪತ್ತು ನಿರ್ವಹಣೆಯ ಕಾರ್ಯ**

ಹಿಂದೂ ಮಹಾಸಾಗರದಲ್ಲಿ ಉಂಟಾಗುವ ವ್ಯತ್ಯಯಗಳ ಬಗ್ಗೆ ಸೂಚನೆ ನೀಡಿಕೆ ಹಾಗೂ ಪ್ರಕೃತಿ ವಿಕೋಪದಿಂದ ಹಾನಿ ಉಂಟಾದ ಸಂದರ್ಭದಲ್ಲಿ ಮೂಲಸೌಕರ್ಯಗಳಿಗೆ ಸಂಪರ್ಕ ಸೇತುವೆಯಾಗಿ ಉಪಗ್ರಹಗಳು ನಿಲ್ಲಲಿವೆ. ಭಾರತವಷ್ಟೇ ಅಲ್ಲದೆ ಬಾಂಗ್ಲಾದೇಶ, ಭೂತಾನ್, ಮಾಲ್ದೀವ್ಸ್, ನೇಪಾಳ, ಶ್ರೀಲಂಕಾ, ಸೀಷೆಲ್ಸ್ ಹಾಗೂ ತಾಂಜೆನಿಯಾಗಳಿಗೂ ಇದರಿಂದ ಲಾಭ ದೊರೆಯುತ್ತಿದೆ. ಇವಲ್ಲದೆ ದೂರದರ್ಶನದ 28 ಕ್ಕೂ ಅಧಿಕ ವಾಹಿನಿಗಳು, ಆಕಾಶವಾಣಿ ಹಾಗೂ ಎಫ್‌ಎಂ ವಾಹಿನಿಗಳ ಕಾರ್ಯ ನಿರ್ವಹಣೆಗೆ ಉಪಗ್ರಹಗಳ ಅವಶ್ಯಕತೆ ಖಂಡಿತಾ ಇದೆ.

*** ದೂರ ಸಂವೇದಿ ಉಪಗ್ರಹಗಳ ಲಾಭ**

ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಯೋಜನೆ ಮೂಲಕ ಗ್ರಾಮೀಣ ಭಾಗದಲ್ಲಿ ಅಂತರ್ಜಲ ಶೋಧ ಕಾರ್ಯ ಯಶಸ್ವಿಯಾಗಿ ಸಾಗಿದೆ. ಡಿಜಿಟಲ್ ಮ್ಯಾಪಿಂಗ್, ಹೈಡ್ರಾಲಜಿ ಮೂಲಕ ಮಾಹಿತಿಗಳನ್ನು ಗಣಕದಲ್ಲಿ ಶೇಖರಿಸಿ ಮುಂದಿನ ಕಾರ್ಯಕ್ಕೆ ಬೇಕಾದಾಗ ಉಪಯೋಗಿಸುವ ಸೌಲಭ್ಯ ಕಲ್ಪಿಸಲಾಗಿದೆ. ಈ ಯೋಜನೆಯ ಮೊದಲ ಹಂತದಲ್ಲಿ ಸುಮಾರು 65,750 ಬಾವಿಗಳನ್ನು ತೆಗೆಯಲಾಗಿದೆ. ಅಂತರ್ಜಲ ಮಟ್ಟ ಕಾಯ್ದುಕೊಳ್ಳಲು ಯೋಜನೆ ರೂಪಿಸಲಾಗಿದೆ. ಇದಲ್ಲದೆ ರಾಜ್ಯದಲ್ಲಿ ವಿಶ್ವಬ್ಯಾಂಕ್

**ANTRIX ಕಾರ್ಪೋರೇಷನ್, ಇಸ್ರೋದ ವಾಣಿಜ್ಯ ವಿಭಾಗ. ಫ್ರಾನ್ಸ್, ಅಮೆರಿಕಕ್ಕೆ ಸರಿಸಮಾನವಾಗಿ ಅಂತರಿಕ್ಷ ಚಿತ್ರಗಳು ಹಾಗೂ ಮಾಹಿತಿಗಳ ವ್ಯಾಪಾರ ವಹಿವಾಟು ನಡೆಸುತ್ತಿರುವ ಸಂಸ್ಥೆ. ಇಸ್ರೋದ 5 ಉಪಗ್ರಹಗಳು ಕಳುಹಿಸುವ 40 ಮಿಲಿಯನ್ ಡಾಲರ್‌ಗೂ ಹೆಚ್ಚಿನ ಮೌಲ್ಯದ ಇಮೇಜ್‌ಗಳನ್ನು ಇದು ಹೊಂದಿದೆ.**

ಇಸ್ರೋ ಎಂಬ ನಮ್ಮ ಹೆಮ್ಮೆ



ಘೋಷಿತ ಸುಮಾರು 854ಕ್ಕೂ ಅಧಿಕ ಅತಿ ಸೂಕ್ಷ್ಮ ನೀರಾವರಿ ಯೋಜನೆಗಳ ವಿನ್ಯಾಸ, ನಿರ್ವಹಣೆ ಹಾಗೂ ಅಭಿವೃದ್ಧಿ ಕಾರ್ಯದಲ್ಲಿ ಇಸ್ರೊ ಪಾತ್ರ ಹಿರಿದಾದುದು.

ರೈತರಿಗೆ ಅನುಕೂಲವಾಗಲೆಂದು ಕೃಷಿ ಉತ್ಪನ್ನಗಳ ಮಾಹಿತಿ, ತೋಟಗಾರಿಕಾ ಬೆಳೆಗಳ ಮಾಹಿತಿ ಬ್ಯಾಂಕ್ ಅನ್ನು ಸ್ಥಾಪಿಸಲಾಗಿದೆ. ಸದ್ಯದಲ್ಲೇ ಸ್ಥಳೀಯ ಭಾಷೆಗಳಲ್ಲಿ ವೆಬ್ ಸೈಟ್ ಆರಂಭಗೊಳ್ಳಲಿದೆ. ಮಳೆ ಪ್ರಮಾಣ, ಮಣ್ಣಿನ ಫಲವತ್ತತೆ, ಕ್ಷೇತ್ರದ ಫಸಲಿನ ಶೇಕಡಾವಾರು ಪ್ರಮಾಣ, ಸಂಪೂರ್ಣ ಹವಾಮಾನ ಸಮೀಕ್ಷೆ, ಕೃಷಿ ಮಾಹಿತಿ ಕೇಂದ್ರಗಳ ಸಂಪರ್ಕ, ಬೆಳೆ ನಿರ್ವಹಣೆ (ಉಪಗ್ರಹ ಆಧಾರಿತವಾಗಿ ಯಾವ ಕ್ಷೇತ್ರದಲ್ಲಿ (ಭೂಮಿಯಲ್ಲಿ) ಯಾವ ಬೆಳೆ ಯಾವ ಕಾಲಕ್ಕೆ ಬೆಳೆದರೆ ಉತ್ತಮ), ರಸಗೊಬ್ಬರ ಬಳಕೆ ಮುಂತಾದ ಸಮಗ್ರ ಮಾಹಿತಿ ಲಭ್ಯವಾಗಲಿದೆ. ಇಸ್ರೊ ಕೃಷಿ ಆಧಾರಿತ ಅಭಿವೃದ್ಧಿಗಾಗಿ ದೂರ ಸಂವೇದಿ ಉಪಗ್ರಹಗಳಲ್ಲದೆ, ರಿಸೋರ್ಸ್ ಸ್ಯಾಟ್, ಓಷನ್ ಸ್ಯಾಟ್, ಕಾರ್ಟೋ ಸ್ಯಾಟ್‌ಗಳನ್ನು ಉಡಾಯಿಸಿದೆಯಲ್ಲದೆ ಆಪತ್ತು ನಿರ್ವಹಣೆಯತ್ತ ಕೂಡ ವಿಶೇಷ ಗಮನ ಹರಿಸಿದೆ.

ಮರುಭೂಮಿ, ನದಿ ಮುಖಜ ಭೂಮಿ, ಹಿಮಪ್ರದೇಶಗಳ ಹವಾಮಾನ ವೈಪರೀತ್ಯಗಳ ಮೇಲೆ ನಿಗಾ ಇಡುವುದು, ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗೆ ಸೂಕ್ತ ಸ್ಥಳ ಹುಡುಕುವಿಕೆ, ಜಲಾಶಯಗಳ ನೀರಿನ ಮಟ್ಟದಲ್ಲಿನ ಏರುಪೇರು, ಚಂಡಮಾರುತಗಳ ಹಾವಳಿಯ ಬಗ್ಗೆ ಮಾಹಿತಿ, ಹಡಗುಗಳ ಚಲನೆ ಮೇಲೆ ನಿಗಾ ಇಡುತ್ತ ಜಲಸೇನೆ, ಕೋಸ್ಟ್ ಗಾರ್ಡ್, ವಾಣಿಜ್ಯ ಹಡಗು ಮಾಲೀಕರು ಹಾಗೂ ಸಾಮಾನ್ಯ ಮೀನುಗಾರರಿಗೆ ಇಸ್ರೊ ಸಹಾಯಕವಾಗಿದೆ. ಡಿಜಿಟಲ್ ಮ್ಯಾಪಿಂಗ್ ಮೂಲಕ ಪ್ರತಿ ರಾಜ್ಯಗಳ ಗಡಿ, ನದಿ, ಅರಣ್ಯ ಪ್ರದೇಶಗಳ ನಿಖರ ಮಾಹಿತಿ ಕಲೆಹಾಕಿ, ಅಭಿವೃದ್ಧಿ ಕಾರ್ಯಗಳನ್ನು ರೂಪಿಸಲು ಸಹಾಯಕವಾಗಿ ಇಸ್ರೋ ನಿಂತಿದೆ. ಸುನಾಮಿ ಹೊಡೆತಕ್ಕೆ ಸಿಕ್ಕು ಜರ್ಝರಿತವಾಗಿದ್ದ ತಮಿಳುನಾಡು ಬಂಗಾಳ ಮುಂತಾದ ಪ್ರದೇಶಗಳಲ್ಲಿ ಆಪತ್ತು ನಿರ್ವಹಣಾ ಘಟಕವು ಇಸ್ರೊ ಉಪಗ್ರಹಗಳ ಮೂಲಕ ಸ್ಯಾಟಲೈಟ್ ಫೋನ್, ವಿಡಿಯೋ ಕಾನ್ಫರೆನ್ಸ್, ಟೆಲಿ ಮೆಡಿಸಿನ್ ಸೌಲಭ್ಯಗಳನ್ನು ಬಳಸಿ ಅಸಂಖ್ಯಾತ ಸಂತ್ರಸ್ತರಿಗೆ ದಾರಿದೀಪವಾದದ್ದು ಸತ್ಯ ಕಥೆ. ಇದಲ್ಲದೆ ಪ್ರವಾಹ ಪೀಡಿತ ಅಸ್ಸಾಂ, ಬಿಹಾರ್, ಒರಿಸ್ಸಾ ಹಾಗೂ ಬಂಗಾಳ ರಾಜ್ಯಗಳಲ್ಲಿ ಯಶಸ್ವಿಯಾಗಿ ಆಪತ್ತು ನಿರ್ವಹಣೆ ಕಾರ್ಯವನ್ನು ಮಾಡಲಾಗಿದೆ. ಒಟ್ಟಿನಲ್ಲಿ ದೇಶದ ಸಮಗ್ರ ಅಭಿವೃದ್ಧಿ ಕಾರ್ಯದಲ್ಲಿ ಇಸ್ರೊ ಸಿಂಹಪಾಲು ಹೊಂದಿದೆ. ತಂತ್ರಜ್ಞಾನವನ್ನು ಗ್ರಾಮದತ್ತ ಕೊಂಡೊಯ್ದು ಗ್ರಾಮ ಸ್ವರಾಜ್ಯದ ಕಲ್ಪನೆಗೆ ಇಂಬುನೀಡಿದೆ. ಇಸ್ರೊದಿಂದ ಗ್ರಾಮೀಣಾಭಿವೃದ್ಧಿಯ ಕಾರ್ಯವಂತೂ ನಿಲ್ಲದ ಹರಿವ ನದಿಯಂತೆ ಸಾಗುತ್ತಿರುತ್ತದೆ. ದೇಶದ ಯೋಧರಂತೆ, ತಪಸ್ಸಿಗೆ ಕುಳಿತ ಋಷಿಗಳಂತೆ ವಿಜ್ಞಾನಿಗಳು ಕಾರ್ಯ ನಿರ್ವಹಿಸಿ ದೇಶವನ್ನು ಸತ್ವಮಾರ್ಗದಲ್ಲಿ ಮುನ್ನಡೆಸಲು ಪಣತೊಟ್ಟಿದ್ದಾರೆ. ಅವರ ಹಂಬಲಕ್ಕೆ ಒಮ್ಮೆ ಸಲಾಂ ಹೇಳುತ್ತಾ ಹೆಮ್ಮೆಯಿಂದ ಅವರು ನೀಡುವ ಸಾಧನಗಳನ್ನು ಬಳಸಿ ದೇಶದ ಅಭಿವೃದ್ಧಿ ಕಾಯಕದಲ್ಲಿ ಒಂದಾಗೋಣ.

**ಸುನಾಮಿ ಹೊಡೆತಕ್ಕೆ ಸಿಕ್ಕು ಜರ್ಝರಿತವಾಗಿದ್ದ ತಮಿಳುನಾಡು ಬಂಗಾಳ ಮುಂತಾದ ಪ್ರದೇಶಗಳಲ್ಲಿ ಆಪತ್ತು ನಿರ್ವಹಣಾ ಘಟಕವು ಇಸ್ರೊ ಉಪಗ್ರಹಗಳ ಮೂಲಕ ಸ್ಯಾಟಲೈಟ್ ಫೋನ್, ವಿಡಿಯೋ ಕಾನ್ಫರೆನ್ಸ್, ಟೆಲಿ ಮೆಡಿಸಿನ್ ಸೌಲಭ್ಯಗಳನ್ನು ಬಳಸಿ ಅಸಂಖ್ಯಾತ ಸಂತ್ರಸ್ತರಿಗೆ ದಾರಿದೀಪವಾದದ್ದು ಸತ್ಯ ಕಥೆ. ಇದಲ್ಲದೆ ಪ್ರವಾಹ ಪೀಡಿತ ಅಸ್ಸಾಂ, ಬಿಹಾರ್, ಒರಿಸ್ಸಾ ಹಾಗೂ ಬಂಗಾಳ ರಾಜ್ಯಗಳಲ್ಲಿ ಯಶಸ್ವಿಯಾಗಿ ಆಪತ್ತು ನಿರ್ವಹಣೆ ಕಾರ್ಯವನ್ನು ಮಾಡಲಾಗಿದೆ. ಒಟ್ಟಿನಲ್ಲಿ ದೇಶದ ಸಮಗ್ರ ಅಭಿವೃದ್ಧಿ ಕಾರ್ಯದಲ್ಲಿ ಇಸ್ರೊ ಸಿಂಹಪಾಲು ಹೊಂದಿದೆ.**

**ಇಸ್ರೊ ಎಂಬ ನಮ್ಮ ಹೆಮ್ಮೆ**

ಇಸ್ರೋ ಯೋಜನೆಗಳಿಗೆ ಭಾರತ ವಿನಿಯೋಗಿಸುವ ಹಣ ವಾರ್ಷಿಕ ಒಂದು ಬಿಲಿಯನ್ ಡಾಲರ್ ಆಗಿದ್ದರೆ, ಅಮೇರಿಕ ತನ್ನ 'ನಾಸಾ'ಕ್ಕೆ 17 ಬಿಲಿಯನ್ ಡಾಲರ್ ವೆಚ್ಚ ಮಾಡುತ್ತದೆ. ಆದರೂ ಭಾರತದ ಇಸ್ರೋದ ಸಾಧನೆ ಅದ್ವಿತೀಯವೇ. ಏಪ್ರಿಲ್ 27, 2008 ರಂದು ಏಕಕಾಲಕ್ಕೆ 10 ಉಪಗ್ರಹಗಳನ್ನು ಅಂತರಿಕ್ಷಕ್ಕೆ ಹಾರಿಬಿಡುವ ಮೂಲಕ ಇಸ್ರೋ ವಿಶ್ವ ದಾಖಲೆ ನಿರ್ಮಿಸಿತು.





## ಕಥಾ ರಶ್ಮಿ

ಮುಂದೆ ಒಂದು ದಿನ ಕಲ್ಕತ್ತೆಯ ಮನೆಯೊಂದರಲ್ಲಿ ಶುಭಳನ್ನು ಅವಳ ತಾಯಿ ಬಹಳ ನಾಜೂಕಿನಿಂದ ಶೃಂಗರಿಸುತ್ತಿದ್ದಳು. ಅವಳ ಕೂದಲನ್ನು ನೇಯ್ದು ಅದಕ್ಕೊಂದು ರೇಷ್ಮೆಯ ರಿಬ್ಬನ್ ಕಟ್ಟಿ, ಒಂದಷ್ಟು ಆಭರಣಗಳನ್ನು ಅವಳ ಮೇಲೆ ಹೇರಿ, ಅವಳ ಸಹಜ ಸೌಂದರ್ಯವನ್ನು ಪೂರ್ತಿ ಮರೆ ಮಾಚಲು ಶತಪ್ರಯತ್ನ ಮಾಡಲಾಯಿತು. ಶುಭಳ ಕಣ್ಣಲ್ಲಿ ಮಾತ್ರ ನೀರು ತುಂಬಿ ಬರುತ್ತಿತ್ತು. ಇದರಿಂದ ಅವಳ ಶೃಂಗಾರವೆಲ್ಲ ಹಾಳಾದೀತೆಂದು ಹೆದರಿದ ಆಕೆಯ ತಾಯಿ ಚೆನ್ನಾಗಿ ಬಯ್ದಳು. ಆದರೆ ಆ ಬಯ್ಗುಳ ಕೇಳಲೇ ಇಲ್ಲವೇನೋ ಎಂಬಂತೆ ಕಣ್ಣೀರು ಸುರಿಯುತ್ತಲೆ ಇತ್ತು. ಮದುಮಗ ತನ್ನೊಬ್ಬ ಸ್ನೇಹಿತನೊಡನೆ ವಧುಪರೀಕ್ಷೆಗೆ ಬಂದ. ಅವಳ ತಂದೆ–ತಾಯಿಗಂತೂ ಆತಂಕದಿಂದ ತಲೆಸುತ್ತು ಬಂದಂತೇ ಆಗಿತ್ತು. ಪರೀಕ್ಷಕನ ಎದುರಿಗೆ ಕಳುಹಿಸುವ ಮೊದಲು, ಶುಭಳ ತಾಯಿ, ಕೆಲವೊಂದು ನೋವುಂಟು ಮಾಡುವ ಮಾತುಗಳನ್ನು ಒಳಗಿಂದಲೇ ಜೋರಾಗಿ ಅವಳಿಗೆ ಕೇಳುವಂತೆ ಹೇಳಿದಳು. ಕಾರಣ, ಶುಭಳ ಅಳು ಇಮ್ಮಡಿಯಾಗಲೆಂದು. ಆಕೆಯನ್ನು ಮೇಲಿಂದ ಕೆಳಕ್ಕೆ ಒಂದೇ ಸಮನೆ ನೋಡಿದ ಆ ಮಹಾಶಯ, “ಹುಂ, ಪರ್ವಾಗಿಲ್ಲ.” ಎಂದ.

ಅವಳ ಕಣ್ಣೀರು ಅವನ ವಿಶೇಷ ಗಮನ ಸೆಳೆದಿತ್ತು. ತನ್ನ ತಂದೆ–ತಾಯಿಯನ್ನು ತೊರೆಯಲು ಇಷ್ಟು ದುಃಖಿಸುವ ಆಕೆ ಬಹಳ ಮೃದುಮನಸ್ಸಿನವಳಿರಬೇಕು, ತನಗೆ ಒಳ್ಳೆಯದೇ ಆಯಿತೆಂದುಕೊಂಡ. ಕಪ್ಪೆಚಿಪ್ಪಿನೊಳಗಿನ ನೀರಹನಿ ಮುತ್ತಾದಂತೆ, ಆ ಮಗುವಿನ ಕಣ್ಣೀರೇ ಅವಳ ಮೌಲ್ಯವನ್ನು ಹೆಚ್ಚಿಸಿತ್ತು. ಬಂದಿದ್ದವ ಬೇರೇನೂ ಮಾತಾಡದೇ ಒಪ್ಪಿಬಿಟ್ಟ.



ಪಂಚಾಗವನ್ನು ನೋಡಿ, ಲೆಕ್ಕ ಹಾಕಿ ಒಂದು ಶುಭಮುಹೂರ್ತದಲ್ಲಿ ಮದುವೆ ನಡೆಯಿತು. ತಮ್ಮ ಮೂಕಮಗಳನ್ನು ಇನ್ನೊಬ್ಬರಿಗೆ ಒಪ್ಪಿಸಿದವರಾಗಿ, ಶುಭಳ ತಂದೆ–ತಾಯಿ ಮನೆಗೆ ಮರಳಿದರು. ದೇವರ ದಯೆ ಯಿಂದ ಅವರು ಅವರ ಜಾತಿಯಲ್ಲೇ ಉಳಿಯುವಂತಾಯಿತು! ಇತ್ತ, ಮದುಮಗನಿಗೆ ಪಶ್ಚಿಮದ ಕಡೆಗಿನ ಒಂದು ಊರಿನಲ್ಲಿ ಕೆಲಸವಾಗಿದ್ದ ಕಾರಣ, ಮದುವೆಯಾದ ಕೆಲವೇ ದಿನಗಳಲ್ಲಿ ಆತ ತನ್ನ ಮಡದಿಯೊಂದಿಗೆ ಅಲ್ಲಿಗೆ ಹೋದ.

ಮದುಮಗಳು ಮೂಗಿಯೆಂಬುದು ತಿಳಿಯಲು ಹೆಚ್ಚು ದಿನ ಬೇಕಾಗಲಿಲ್ಲ. ಕೇವಲ ಹತ್ತು ದಿನಗಳಲ್ಲಿ ಎಲ್ಲರಿಗೂ ತಿಳಿದುಬಿಟ್ಟಿತು. ಒಂದು ಪಕ್ಷ ಯಾರಿಗಾದರೂ ತಿಳಿಯದೇ ಹೋಗಿದ್ದರೆ, ಅದು ಅವಳ ತಪ್ಪಲ್ಲ, ಅವಳ್ಯಾರಿಗೂ ವಂಚಿಸಲಿಲ್ಲ. ಅವಳ ಕಣ್ಣುಗಳೇ ಅವರಿಗೆ ಎಲ್ಲವನ್ನೂ ಹೇಳುತ್ತಿದ್ದವು. ಆದರೆ ಅದನ್ನು ಅರ್ಥಮಾಡಿಕೊಳ್ಳುವವರು ಯಾರೂ ಇರಲಿಲ್ಲ. ಎಲ್ಲೆಲ್ಲಿ ಹುಡುಕಿದರೂ ತನಗೆ ಆತ್ಮೀಯರೆನಿಸುವವರು ಯಾರೂ ಸಿಗಲಿಲ್ಲ ಆಕೆಗೆ. ತನ್ನ ಮೊದಲಿನ ಪರಿಚಿತ ಮುಖಗಳನ್ನೆಲ್ಲ ನೆನೆದು ದುಃಖ ಉಮ್ಮಳಿಸಿ ಬಂತು. ಆ ಮೂಕ ಹುಡುಗಿಯ ಮುಗ್ಧ ಹೃದಯದಲ್ಲಿ ನಿಶ್ಶಬ್ದವಾದ, ಪರಿಮಿತಿಯಿಲ್ಲದ ವೇದನೆಯೊಂದು ಮಾರ್ದನಿಸುತ್ತಿತ್ತು. ಹೃದಯದ ಮಾತು ಬಲ್ಲವರಿಗೆ ಮಾತ್ರ ಕೇಳಿಸೀತು, ಅವಳ ಆ ವೇದನೆ.

ಈ ಬಾರಿ ಕೇವಲ ಕಣ್ಣಿನಿಂದ ಮಾತ್ರ ಅಲ್ಲದೆ, ಕಣ್ಣು ಮತ್ತು ಕಿವಿಗಳೆರಡನ್ನೂ ಬಳಸಿಕೊಂಡು ವಧುಪರೀಕ್ಷೆ ಮಾಡಿದ ಆತ, ಮಾತನಾಡಬಲ್ಲ ಒಬ್ಬಾಕೆಯನ್ನು ಎರಡನೇ ಮದುವೆಯಾದ!

### ಬಾಹ್ಯಾಕಾಶ ಉದ್ಯಮದಲ್ಲಿ ನಮ್ಮ 'ಇಮೇಜ್' ಬೇರೆ !!

**ಇಸ್ರೊ ಎಂಬ ನಮ್ಮ ಹೆಮ್ಮೆ**

ತನ್ನ ಐಕೋನೋಸ್ ಉಪಗ್ರಹದಿಂದ ತೆಗೆಯಲಾದ 1M ರೆಸಲ್ಯೂಷನ್ ಚಿತ್ರಗಳನ್ನು ಭಾರತದೊಂದಿಗೆ ಹಂಚಿಕೊಳ್ಳಲು ಅಮೇರಿಕ ನಿರಾಕರಿಸಿತು. ಆದರೆ ಇದರಿಂದ ವಿಚಲಿತವಾಗದ ಇಸ್ರೋ ತನ್ನದೇ ಆದ 'ತಂತ್ರಜ್ಞಾನ ಪ್ರಯೋಗ ಉಪಗ್ರಹ'ಗಳನ್ನು ಹಾರಿಸಿ ಭೂಮಿಯ 1M ರೆಸಲ್ಯೂಷನ್ ಮತ್ತೂ ಅದಕ್ಕೂ ಉತ್ತಮ ಗುಣಮಟ್ಟದ ಇಮೇಜ್‌ಗಳನ್ನು ಪಡೆಯಲು ಶಕ್ತವಾಗುವ ಮೂಲಕ ಈ ಕಾರ್ಯದಲ್ಲಿ ಅಮೇರಿಕದ ನಂತರ ವಿಶ್ವದಲ್ಲೇ ಭಾರತವನ್ನು ಏಕ ಮಾತ್ರ ರಾಷ್ಟ್ರವಾಗಿಸುವಲ್ಲಿ ಯಶಸ್ವಿಯಾಯಿತು.

ಟ್ಯಾಗೋರ್‌ರ 'ಸುಭಾಷಿಣಿ'ಯ ಕಥೆ

ಅವಳು ನಿಧಾನವಾಗಿ ಬೆಳೆಯುತ್ತಿದ್ದಂತೆ ತನ್ನನ್ನು ತಾನು ಕಂಡುಕೊಳ್ಳ ಹೊರಟಳು. ಪೂರ್ಣಚಂದಿರನಿಂದ ಸಮುದ್ರಮಧ್ಯದಲ್ಲಿ ಉಬ್ಬರವಿಳಿತಗಳು ಬಂದಂತೆ ಬಣ್ಣಿಸಲಾಗದ ತಿಳಿವೊಂದು ಅವಳ ಮೂಲಕ ಹರಿದಾಡತೊಡಗಿತು. ತನ್ನ ಬಗೆಗೆ ಶೋಧಿಸಿದಷ್ಟೂ ಉತ್ತರ ಹೊಳೆಯದ ಪ್ರಶ್ನೆಗಳೇ ಏಳುತ್ತಿದ್ದವು.

*

ಪೂರ್ಣಚಂದಿರನಿದ್ದ ಆ ಒಂದು ತಡರಾತ್ರಿ, ಶುಭ ಬಾಗಿಲು ತೆರೆದು ಅಂಜಿಕೆಯಿಂದ ಹೊರಕ್ಕೆ ಬಾಗಿ ನೋಡಿದಳು. ಏಕಾಂಗಿಯಾದ ಶುಭಳಂತೆ ಇದ್ದ ಚಂದಿರನನ್ನು ಹೊಂದಿದವಳಾಗಿ, ಆ ಪ್ರಕೃತಿಮಾತೆ, ಮಲಗಿ ನಿದ್ರಿಸುತ್ತಿದ್ದ ಭೂಮಿಯನ್ನು ನೋಡುತ್ತಿದ್ದಳು. ಶುಭಳ ಒಳಗಿದ್ದ ಯುವಮನಸ್ಸು ಸಂತಸ-ದುಃಖ ಗಳೆರಡರೊಂದಿಗೆ ತುಂಬಿ ತುಳುಕುತ್ತಿತ್ತು. ಏನೋ ತೀಕ್ಷ್ಣವಾದ ಏಕಾಂಗಿತನದ ಭಾವ ಅವಳನ್ನು ಕಾಡು ತ್ತಿತ್ತು. ಆ ಮೌನವಾದ ತಾಯಿಯ ಮುಂದೆ ಹಾಗೇ ಮೌನಿಯಾದ ಮಗಳಾಗಿ ನಿಂತಿದ್ದಳು, ಶುಭ.

ಆಕೆಯ ಮದುವೆಯ ವಿಚಾರ ಅವಳ ಹೆತ್ತವರಿಗೆ ತೀರ ಆತಂಕವನ್ನು ತಂದೊಡ್ಡಿತ್ತು. ಈ ವಿಷಯದಲ್ಲಿ ಅವರು ಜನರ ಬಾಯಿಗೆ ಆಹಾರವಾಗಿದ್ದರು. ಕೆಲವ ರಂತೂ ಅವರನ್ನು ಜಾತಿಯಿಂದ ಬಹಿಷ್ಕರಿಸಲೂ ಆಲೋಚಿಸಿದ್ದರು. ತಕ್ಕಮಟ್ಟಿನ ಸ್ಥಿತಿವಂತನಾದ ಬಣಿಕಾಂತನಿಗೆ ಶತ್ರುಗಳೇನೂ ಕಡಿಮೆಯಿರಲಿಲ್ಲ. ಈ ವಿಚಾರದ ಬಗೆಗಿನ ಚಿಂತೆಯಲ್ಲಿ ಆತ ಸ್ವಲ್ಪ ದಿನ ಮನೆಬಿಟ್ಟು ಹೋದ. ಮರಳಿ ಬಂದವನೇ, "ನಾವು ಕಲ್ಕತ್ತೆಗೆ ಹೋಗಬೇಕು" ಎಂದು ಹೇಳಿದ.

ಅವರೆಲ್ಲ ಆ ಅಪರಿಚಿತ ಸ್ಥಳಕ್ಕೆ ಹೋಗಲು ಅಣಿಯಾಗುತ್ತಿದ್ದರು. ಶುಭ ಹೃದಯಭಾರ ವಾದಂತಾಗಿ ಕಣ್ಣೀರಿಡಲಾರಂಭಿಸಿದಳು. ಅದೇನೋ ಒಂದು ಅನಿಶ್ಚಿತ ಭಯದಿಂದ ತನ್ನ ತಂದೆ-ತಾಯಿ ಯನ್ನೇ ನೋಡುತ್ತಿದ್ದಳು, ಮೂಕಪ್ರಾಣಿಯಂತೆ. ಅಗಲವಾಗಿ ತೆರೆದ ಅವಳ ಆ ಕಣ್ಗಳು, ಅವರ ಮುಖವನ್ನು ಓದಿ ಅದೇನೋ ತಿಳಿಯ ಬಯಸಿದ್ದವು. ಆದರೆ ಅವರ್ಯಾರೂ ಒಂದು ಶಬ್ಧವನ್ನೂ ಅನುಗ್ರಹಿಸಲಿಲ್ಲ. ಒಂದು ಮಧ್ಯಾಹ್ನ, ಮೀನು ಹಿಡಿಯುತ್ತಿದ್ದ ಪ್ರತಾಪ, "ಹಾಗಾದ್ರೆ ಸು, ಒಬ್ಬ ಮದು ಮಗನನ್ನು ಹಿಡಿದೇಬಿಟ್ಟೆ! ನೀನು ಮದುವೆಯಾಗುವ ವಳಿದ್ದೀಯ! ಹೇ, ನನ್ನನ್ನು ಮರೀಬೇಡ ಮತ್ತೆ" ಎಂದು ಹೇಳಿ ಬಳಿಕ ಮೀನು ಹಿಡಿಯುವತ್ತ ತಿರುಗಿದ. ಬೇಟೆಗೊಳಗಾದ ಹರಿಣವೊಂದು ಮರಣ ಸಂಕಟದಿಂದ ಬೇಟೆಗಾರನನ್ನು ನೋಡುತ್ತಾ "ನಾನು ನಿನಗೇನು ಕೇಡು ಮಾಡಿದ್ದೆ?" ಎನ್ನುವಂತೆ ಶುಭ ಪ್ರತಾಪನತ್ತ ನೋಡಿದಳು. ಮತ್ತೆ ಅಲ್ಲಿ ಹೆಚ್ಚು ಹೊತ್ತು ಕೂರಲು ಮನಸ್ಸಾಗದೆ ಅಲ್ಲಿಂದ ಎದ್ದು ಬಂದಳು. ಮಧ್ಯಾಹ್ನದ ನಸುನಿದ್ದೆಯನ್ನು ಮುಗಿಸಿದ ಬಣಿಕಾಂತ ತನ್ನ ಕೋಣೆಯಲ್ಲಿ ಕೂತು, ಆರಾಮ ದಿಂದ ಹೊಗೆಬತ್ತಿ ಸೇದುತ್ತಿದ್ದ. ಸೀದ ಹೋದವಳೇ, ಶುಭ, ಅವನ ಕಾಲಿಗೆ ಬಿದ್ದು ಅಳತೊಡಗಿದಳು. ಬಣಿಕಾಂತ ಅವಳನ್ನು ಸಮಾಧಾನ ಮಾಡಲೆತ್ನಿಸಿದರೂ ಅವನ ಕಣ್ಣುಗಳೇ ಒದ್ದೆಯಾಗಿಬಿಟ್ಟವು.

ಮರುದಿನ ಅವರೆಲ್ಲ ಕಲ್ಕತ್ತೆಗೆ ಹೋಗುವುದೆಂದು ನಿರ್ಧರಿತವಾಗಿತ್ತು. ತನ್ನ ಬಾಲ್ಯದ ಸಖಿಯರಿಗೆ ವಿದಾಯ ಹೇಳಲು ಶುಭ ಕೊಟ್ಟಿಗೆಯತ್ತ ಹೆಜ್ಜೆ ಹಾಕಿದಳು. ಅವುಗಳಿಗೆ ತನ್ನ ಕೈಯಾರೆ ತಿನ್ನಿಸಿ, ಮುದ್ದಿಸಿದಳು. ಅವು ಸುರಿಸುತ್ತಿದ್ದ ಕಣ್ಣೀರು ಅವಳಿಗಾಗಿ ಏನೋ ಹಾರೈಸುತ್ತಿರುವಂತೆ ತೋರುತ್ತಿತ್ತು. ಅದು ಪೌರ್ಣಿಮೆಯ ನಂತರದ ಹತ್ತನೆಯ ರಾತ್ರಿಯಾಗಿತ್ತು. ಶುಭ ತನ್ನ ಕೋಣೆಯಿಂದ ಹೊರನಡೆದು ತನಗೆ ಬಹಳ ಪ್ರೀತಿಯ ಸ್ಥಳವಾದ ಆ ನದೀದಂಡೆಯ ಮೇಲಿನ ಹುಲ್ಲುಹಾಸಿನ ಮೇಲೆ ಹಾಗೇ ಬಿದ್ದು ಕೊಂಡಳು. ತನ್ನ ಪ್ರೀತಿಯ, ತನ್ನಂತೇ ಮೂಕಳಾದ ಆ ತಾಯಿಯತ್ತ ಕೈಚಾಚಿ, "ನನ್ನನ್ನು ನಿನ್ನಿಂದ ದೂರವಾಗಲು ಬಿಡಬೇಡ ಅಮ್ಮ. ನನ್ನಂತೆ ನೀನೂ ನನ್ನನ್ನು ಬಾಚಿ ತಬ್ಬಿಕೋ ಬಾ ಅಮ್ಮ." ಎಂದು ಆಕೆ ಹೇಳುತ್ತಿರುವಂತೆ ಭಾಸವಾಗುತ್ತಿತ್ತು ಆ ದೃಶ್ಯ.

ಇಸ್ರೋ ಎಂಬ ನಮ್ಮ ಹೆಮ್ಮೆ

ಇಸ್ರೋ ತನ್ನದೇ ಆದ ಎಂಟು ದೂರಸಂಪರ್ಕ ಉಪಗ್ರಹಗಳ ಮೂಲಕ ಭಾರತದ 35,000 ದೂರ ಸಂಪರ್ಕ ಹಾಗೂ ಟೆಲಿಮೆಡಿಸಿನ್ ಮತ್ತು ಮಾಹಿತಿ ತಂತ್ರಜ್ಞಾನ ಕಂಪೆನಿಗಳಿಗೆ ತನ್ನ ಸೇವೆಯನ್ನು ಒದಗಿಸುತ್ತಿದೆ. ಇಸ್ರೋದ ಸಾಧನೆಗಳಿಗೆ ಮೆಚ್ಚುಗೆ ಸೂಚಿಸಿರುವ ವಿಶ್ವಸಂಸ್ಥೆಯ ಉನ್ನತ ಮಟ್ಟದ ನಿಯೋಗ ಭಾರತದಲ್ಲಿ 'ಅಂತರಿಕ್ಷ ವಿಜ್ಞಾನ'ಕ್ಕೆ ಸಂಬಂಧಿಸಿದ ಶಿಕ್ಷಣ ಸಂಸ್ಥೆಯೊಂದನ್ನು ತೆರೆಯಲು ನೆರವು ನೀಡುವುದಾಗಿ ಹೇಳಿದೆ.





# ಟ್ಯಾಗೋರ್‌ರ 'ಸುಭಾಷಿಣಿ'ಯ ಕಥೆ

**ವಿಶ್ವ ಪ್ರಸಿದ್ಧ ಕವಿ ಗುರುದೇವ ರವೀಂದ್ರನಾಥ ಟ್ಯಾಗೋರ್‌ರ ಪ್ರಸಿದ್ಧ ಕಥೆ 'ಸುಭಾಷಿಣಿ'ಯನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ ಅನುಶ್ರೀ ಬಂದಾಡಿ.**

**ಇದು ಅನುಶ್ರೀರವರ ಮೊದಲ ಅನುವಾದ.**

**************************************************

ಕಥಾ ರಶ್ಮಿ

ಅವಳಿಗೆ ಸುಭಾಷಿಣಿ ಎಂದು ಹೆಸರಿಟ್ಟಾಗ, ಮುಂದೆ ದೊಡ್ಡವಳಾದಾಗ ಅವಳು ಮೂಗಿಯಾಗಿರುವಳೆಂದು ಯಾರು ತಾನೇ ಊಹಿಸಿದ್ದರು? ಸುಖೇಷಿಣಿ ಹಾಗೂ ಸುಹಾಸಿನಿ ಅವಳ ಇಬ್ಬರು ಅಕ್ಕಂದಿರು. ಅವರ ಬಳಿಕ ಹುಟ್ಟಿದ ಆಕೆಗೆ, ಅವಳ ತಂದೆ ಹೆಸರುಗಳಲ್ಲಿ ಪ್ರಾಸಬದ್ಧತೆಯಿರಲು ಸುಭಾಷಿಣಿ ಎಂದು ಹೆಸರಿಟ್ಟರಷ್ಟೆ. ಆದರೆ ಅವಳನ್ನು ಎಲ್ಲರೂ ಕರೆಯುತ್ತಿದ್ದುದು ಮಾತ್ರ 'ಶುಭ' ಎಂದು.

ಗಂಡನ್ನು ಹುಡುಕುವ, ವರದಕ್ಷಿಣೆ ನೀಡುವ ಎಲ್ಲಾ ಸಂಕಷ್ಟಗಳೊಂದಿಗೆ ಅವಳ ಇಬ್ಬರೂ ಅಕ್ಕಂದಿರ ಮದುವೆ ಹೇಗೋ ಆಗಿಹೋಗಿತ್ತು. ಈಗ ಸಣ್ಣ ಮಗಳಾದ ಶುಭ, ತಂದೆ-ತಾಯಿಯರ ಹೃದಯಕ್ಕೆ ಒಂದು ರೀತಿಯ ಭಾರವಾಗಿದ್ದಳು. ಅವಳಿಗೆ ಮಾತು ಬರದ ಕಾರಣ, ಭಾವನೆಗಳೂ ಇರಲಿಕ್ಕಿಲ್ಲ ಎಂದು ಅವರೆಲ್ಲ ಅಂದುಕೊಂಡಿದ್ದರು. ಹಾಗಾಗಿ ಅವಳ ಭವಿಷ್ಯದ ಬಗೆಗಿನ ಆತಂಕಗಳನ್ನು ಅವಳೆದುರೇ ಚರ್ಚಿಸಲಾಗುತ್ತಿತ್ತು. ಇದರಿಂದ ತಾನು ಆ ಮನೆಗೆ ಒಂದು ಶಾಪ ಎಂಬ ಭಾವನೆ ಅವಳಲ್ಲಿ ಸಣ್ಣಂದಿನಿಂದಲೇ ಬೆಳೆದಿತ್ತು. ಸಾಮಾನ್ಯವಾಗಿ ಆಕೆ ಎಲ್ಲರಿಂದಲೂ ದೂರ ಹೋಗಿ ಏಕಾಂತದಲ್ಲಿ ಇರ ಬಯಸುತ್ತಿದ್ದಳು. ತನ್ನನ್ನು ಎಲ್ಲರೂ ಮರೆತರೂ ಅದನ್ನು ಸಹಿಸಿಕೊಳ್ಳುವ ಶಕ್ತಿ ತನ್ನಲ್ಲಿದೆಯೆಂಬ ದೃಢ ಭಾವ ಅವಳಲ್ಲಿತ್ತು. ಆದರೆ ನೋವನ್ನು ಮರೆಯಲು ಯಾರಿಂದ ತಾನೆ ಸಾಧ್ಯ? ಅವಳ ಹೆತ್ತವರನ್ನು ಆಕೆಯ ಭವಿಷ್ಯದ ಚಿಂತೆಯ ನೋವು ಸದಾ ಕಾಡುತ್ತಲೇ ಇತ್ತು. ಅವಳ ತಾಯಿಯಂತೂ ಆಕೆ ಯನ್ನು ಅಂಗವೈಕಲ್ಯದಿಂದ ಕೂಡಿದ ಅನಿಷ್ಟದಂತೆ ನೋಡುತ್ತಿದ್ದಳು. ಒಬ್ಬ ತಾಯಿಗೆ, ಮಗನಿಗಿಂತ ಮಗಳೇ ಹೆಚ್ಚು ಹತ್ತಿರದವಳಾಗಿರುತ್ತಾಳೆ. ಹೀಗಿರುವಾಗ ಆ ಮಗಳಲ್ಲಿನ ಒಂದು ಸಣ್ಣ ಕೊರತೆಯೂ ಅವಳ ವ್ಯಕ್ತಿತ್ವಕ್ಕೇ ಧಕ್ಕೆಯೆಂಬ ಭಾವನೆ ತಂದಿರುತ್ತದೆ. ಶುಭಳ ತಂದೆಯಾದ ಬಣಿಕಾಂತನು, ತನ್ನ ಇತರ ಇಬ್ಬರು ಮಕ್ಕಳಿಗಿಂತ ಅವಳಲ್ಲೇ ಅಧಿಕ ಪ್ರೀತಿಯುಳ್ಳವನಾಗಿದ್ದ. ಆದರೆ ಅವಳ ತಾಯಿ ಮಾತ್ರ ಆಕೆಯನ್ನು ತನ್ನ ದೇಹದಲ್ಲಿನ ಒಂದು ಕಲೆಯಂತೆ ಕಾಣುತ್ತಿದ್ದಳು.

ಶುಭಳಿಗೆ ಮಾತೊಂದು ಬರುತ್ತಿರಲಿಲ್ಲವಷ್ಟೆ. ಆದರೆ, ದಟ್ಟವಾದ ರೆಪ್ಪೆಗೂದಲುಗಳಿಂದ ಆವರಿಸಲ್ಪಟ್ಟ ದೊಡ್ಡ ಕಪ್ಪು ಕಣ್ಗಳ ಒಡತಿಯಾಗಿದ್ದಳು ಆಕೆ. ಅವಳ ಮನಸ್ಸಿನಲ್ಲಿ ಮೂಡುವ ಯಾವುದೇ ಭಾವನೆಗಳನ್ನು ಹಾಗೇ ಹೊರಹಾಕುವ ಸಾಮರ್ಥ್ಯವಿದ್ದ, ಎಲೆಯಂತೆ ಅದುರುವ ಸುಂದರ ತುಟಿಗಳು ಅವಳ ಸೌಂದರ್ಯಕ್ಕೆ ಮತ್ತಷ್ಟು ಮೆರುಗನ್ನಿತ್ತಿದ್ದವು.

ನಾವು ಮಾತುಬರದವರೊಂದಿಗೆ ಸಂವಹಿಸುವಾಗ ಸರಿಯಾದ ಮಾಧ್ಯಮ ಅಷ್ಟು ಸುಲಭವಾಗಿ ದೊರೆಯದು. ಅಲ್ಲೊಂದು ಅನುವಾದಿಸುವ ಪ್ರಕ್ರಿಯೆ ನಡೆಯಬೇಕು. ಬಹುತೇಕ ಸಂದರ್ಭಗಳಲ್ಲಿ ಅದು ಸರಿಯಾಗದೆ ತೊಂದರೆಗೆ ಸಿಲುಕಿಕೊಳ್ಳುವಂತಾಗುತ್ತದೆ. ಆದರೆ ಆಕೆಯ ಆ ಕಪ್ಪು ಕಣ್ಗಳಿಗೆ ಯಾವುದೇ ತರ್ಜುಮೆಯ ಅಗತ್ಯವಿರಲಿಲ್ಲ. ಮನಸ್ಸೇ ಅವುಗಳ ಮೇಲೆ ಬೆಳಕು ಬೀರುತ್ತಿತ್ತು. ಆ ಕಣ್ಗಳಲ್ಲೇ ಯೋಚನೆ

ಗ್ರಾಮೀಣ ಕೃಷಿಕರು ತಮ್ಮ ಕೃಷಿಭೂಮಿಯ ಅಂತರ್ಜಲ ಮಟ್ಟವನ್ನು ನಿರ್ಧರಿಸಲು ಉಪಗ್ರಹಗಳು ಕಳುಹಿಸುವ ಟೋಪೋಗ್ರಾಫಿಕ್ ಹಾಗೂ ಹೈಡ್ರೋಲಾಜಿಕ್ ಇಮೇಜ್‌ಗಳ ಮೂಲಕ ಇಸ್ರೋ ನೆರವು ನೀಡುತ್ತಿದೆ. ಅಷ್ಟೇ ಅಲ್ಲದೆ ಮಳೆ ನೀರು ಸಂಗ್ರಹ ಹಾಗೂ ಅಂತರ್ಜಲ ಮಟ್ಟ ಸುಧಾರಣೆಗೆ ಸಣ್ಣ ಸಣ್ಣ ಅಣೆಕಟ್ಟುಗಳ ನಿರ್ಮಾಣಕ್ಕೆ ಸೂಕ್ತ ಸ್ಥಳದ ಮಾಹಿತಿ ನೀಡುವಲ್ಲೂ ಇಸ್ರೋ ಪ್ರಮುಖ ಪಾತ್ರ ವಹಿಸುತ್ತಿದೆ.

ಇಸ್ರೋ ಎಂಬ ನಮ್ಮ ಹೆಮ್ಮೆ

ಕಥಾ ರಶ್ಮಿ

ಶುರುವಾಗುತ್ತದೆ ಅಥವಾ ಕೊನೆಗೊಳ್ಳುತ್ತದೆ, ಚಂದ್ರನಂತೆ ನಿಶ್ಚಲವಾಗಿ ನಿಲ್ಲುತ್ತದೆ ಅಥವಾ ಆಗಸವನ್ನೆಲ್ಲ ತ್ವರಿತವಾಗಿ ಆವರಿಸಿ ಹೋಗುವ ಮಿಂಚಿನಂತೆ ಸುಳಿಯುತ್ತದೆ. ಹುಟ್ಟಿನಿಂದಲೇ ಬರಿ ತುಟಿಯ ಅದುರುವಿಕೆಯನ್ನು ಹೊರತುಪಡಿಸಿ ಬೇರೆ ಮಾತೇ ಬರದವರು ಆ ಕಣ್ಣುಗಳ ಭಾಷೆಯಲ್ಲಿ ಪರಿಣಿತರಾಗಿರುತ್ತಾರೆ. ಅದು ಭಾವನಾತೀತ, ಸಮುದ್ರದಷ್ಟು ಆಳ, ಸ್ವರ್ಗದಷ್ಟು ಪರಿಶುದ್ಧ. ಅಲ್ಲಿ ನೆರಳು, ಬೆಳಕಿನೊಂದಿಗಿನ ಸೂರ್ಯನ ಉದಯಾಸ್ತಮಾನಗಳ ಆಟವಿರುತ್ತದೆ. ಮೂಕರಾದವರಲ್ಲಿ ಪ್ರಕೃತಿಯಂಥ ಒಂದು ಏಕತಾನತೆಯ ಗಾಂಭೀರ್ಯವಿರುತ್ತದೆ. ಅದಕ್ಕಾಗಿಯೋ ಏನೊ, ಶುಭಳ ಸುತ್ತಮುತ್ತಲಿದ್ದ ಮಕ್ಕಳೆಲ್ಲ ಅವಳನ್ನು ಕಂಡು ಹೆದರುತ್ತಿದ್ದರು. ಆಟವಾಡಲು ಯಾರೂ ಇಲ್ಲದೆ ಆಕೆ ಏಕಾಂಗಿಯಾಗಿದ್ದಳು, ಮಧ್ಯಾಹ್ನದ ಸೂರ್ಯನಂತೆ.

ಅವಳಿದ್ದದ್ದು ಬಂಗಾಳದ ಒಂದು ಪುಟ್ಟ ನದೀ ದಂಡೆಯ ಮೇಲಿದ್ದ ಚಂಡೀಪುರವೆಂಬ ಊರಿನಲ್ಲಿ. ಮಧ್ಯಮ ವರ್ಗದ ಹೆಣ್ಣುಮಗಳೊಬ್ಬಳಂತೆ, ಆ ನದಿ ಎಂದೂ ತನ್ನ ಮಿತಿಯನ್ನು ಮೀರಿ ಹರಿದದ್ದಿಲ್ಲ. ಹಳ್ಳಿಯ ಪ್ರತಿಯೊಂದು ಮನೆಗೂ ನೀರನ್ನೀಯುತ್ತಾ, ಅವರೆಲ್ಲರ ಮನೆಯ ಸದಸ್ಯೆಯಂತೆಯೇ ಇತ್ತು. ಇಕ್ಕೆಲಗಳಲ್ಲಿ ಮನೆಗಳನ್ನೂ, ಮರಗಳಿಂದಾವೃತವಾದ ದಡವನ್ನೂ ಹೊಂದಿತ್ತು. ಹಾಗಾಗಿ ಆ ನದಿ ತನ್ನ ಸಿಂಹಾಸನದಿಂದ ಇಳಿದುಬರುತ್ತಿರುವ ಉದ್ಯಾನದೇವಿಯಂತೆ ತೋರುತ್ತಿತ್ತು.

ಆ ನದಿಯ ಮೇಲಿಂದ ಹೋಗುವವರಿಗೆ ಬಣಿಕಾಂತನ ಮನೆ ಕಾಣುತ್ತಿತ್ತು. ಅವನದ್ದೆಂದಲ್ಲ, ಅದರ ದಂಡೆಯ ಮೇಲಿದ್ದ ಪ್ರತಿಯೊಂದು ಗುಡಿಸಲೂ ಕೂಡ ದೋಣಿಯಲ್ಲಿ ಹೋಗುವವರ ಕಣ್ಣಿಗೆ ಬಿದ್ದೇ ಬೀಳುತ್ತಿತ್ತು. ಆದರೆ ಈ ಮಧ್ಯೆ, ತನ್ನ ಕೆಲಸಗಳೆಲ್ಲ ಮುಗಿದ ಬಳಿಕ ಆ ನದಿಯ ದಂಡೆಯಲ್ಲಿ ಹೋಗಿ ಕೂರುತ್ತಿದ್ದ ಶುಭಳನ್ನು ಮಾತಿನ ಭರದಲ್ಲಿ ಮುಳುಗಿದವರ್ಯಾರೂ ಗಮನಿಸುತ್ತಿರಲಿಲ್ಲ. ಇಲ್ಲಿ ಪ್ರಕೃತಿಯೇ ಅವಳಿಗೆ ಮಾತಾಗಿತ್ತು, ಅವಳೊಂದಿಗೆ ಮಾತನಾಡುತ್ತಿತ್ತು. ಆ ಹರಿಯುವ ನೀರಿನ ಮೆಲುಧ್ವನಿ, ಹಳ್ಳಿಯ ಜನಗಳ ಮಾತು, ದೋಣಿಸಾಗಿಸುವವರ ಹಾಡು, ಹಕ್ಕಿಗಳ ಕೂಗು, ಗಾಳಿಗೆ ಓಲಾಡುವ ಮರದೆಲೆಗಳ ಶಬ್ಧ ಎಲ್ಲವೂ ಅವಳ ಕಂಪಿಸುತ್ತಿದ್ದ ಹೃದಯದಲ್ಲಿ ಒಂದಾಗಿದ್ದವು. ಅವುಗಳೆಲ್ಲ ಜೊತೆಸೇರಿ ಒಂದು ದೊಡ್ಡ ಭಾವದಲೆಯಾಗಿ ಅವಳೆದೆಯನ್ನು ತಟ್ಟುತ್ತಿತ್ತು. ಪ್ರಕೃತಿಯ ಈ ಮೆಲುಮಾತೇ ಅವಳ ಭಾಷೆಯಾಗಿತ್ತು. ಮರದಲ್ಲಿನ ಕೀಟಗಳ ಕೀರಲುಧ್ವನಿಯಿಂದ ಹಿಡಿದು ಆಗಸದಲ್ಲಿನ ನಕ್ಷತ್ರಗಳ ಗಾಢಮೌನದವರೆಗೆ ಅಳು ಹಾಗೂ ನಿಟ್ಟುಸಿರಿನ ಸನ್ನೆಗಳಷ್ಟೇ ಇದ್ದವು. ಮಧ್ಯಾಹ್ನದ ಹೊತ್ತಿನಲ್ಲಿ ಮೀನು ಹಿಡಿಯುವವರು ಹಾಗೂ ದೋಣಿನಡೆಸುವವರು ಊಟಕ್ಕೆ ಹೋಗಿರಲು, ಊರಿನ ಜನರೆಲ್ಲ ಮಧ್ಯಾಹ್ನದ ಲಘು ನಿದ್ದೆಯಲ್ಲಿರಲು, ಅಲ್ಲಿದ್ದ ದೋಣಿಗಳೂ ನಿಶ್ಚಲವಾಗಿರಲು, ತೀವ್ರ ಕಾರ್ಯತತ್ಪರವಾದ ಪ್ರಪಂಚವೆಲ್ಲ ಹೀಗೆ ವಿಶ್ರಾಂತಿಯಲ್ಲಿರಲು ಅಲ್ಲಿ ಇದ್ದದ್ದು, ಮೂಕ ಪ್ರಕೃತಿ ಹಾಗೂ ಆ ಮೂಕ ಹುಡುಗಿ ಮಾತ್ರ. ಸುತ್ತ ಹರಡಿದ್ದ ಸೂರ್ಯನ ಬೆಳಕಿನಲ್ಲಿ ಆಕೆಯಾದರೆ, ಒಂದು ಸಣ್ಣ ಮರದ ನೆರಳಿನಲ್ಲಿ ಈಕೆ.

ಆದರೆ ಶುಭಳಿಗೆ ಸ್ನೇಹಿತರು ಇರಲೇ ಇಲ್ಲವೆಂದಲ್ಲ. ಮನೆಯ ಕೊಟ್ಟಿಗೆಯಲ್ಲಿ ಶಾರದೆ ಹಾಗೂ ದುರ್ಗೆಯೆಂಬ ಎರಡು ದನಗಳಿದ್ದವು. ಅವೆರಡೂ ಎಂದೂ ತಮ್ಮ ಹೆಸರನ್ನು ಅವಳ ಬಾಯಿಂದ ಕೇಳಿದವುಗಳಲ್ಲ. ಆದರೆ ಅವುಗಳಿಗೆ ಅವಳ ಹೆಜ್ಜೆಯ ಸಪ್ಪಳ ಚಿರಪರಿಚಿತವಾಗಿತ್ತು. ಅವಳು ಮಾತನಾಡುತ್ತಿರಲಿಲ್ಲವಾದರೂ, ಅವಳ ಪ್ರೀತಿಯ ಮೆಲುದನಿ ಅವುಗಳಿಗೆ ಅರ್ಥವಾಗುತ್ತಿತ್ತು. ಅವಳು ಅವುಗಳನ್ನು ಮುದ್ದಿಸಿದರೂ, ಬೈದರೂ ಅಥವಾ ಏನೇ ಮಾಡುತ್ತಿದ್ದರೂ ಮನುಷ್ಯರಿಗಿಂತ ಚೆನ್ನಾಗಿ ಅರ್ಥೈಸಿಕೊಳ್ಳುತ್ತಿದ್ದವು. ಅವುಗಳ ಬಳಿಗೆ ಹೋದ ಶುಭ, ಶಾರದೆಯ ಕೊರಳನ್ನು ಬಳಸಿ ಹಿಡಿದು, ತನ್ನ ಕೆನ್ನೆಯನ್ನು ಆ ಸಖಿಯ ಕೆನ್ನೆಗೆ ಸವರುತ್ತಿರಬೇಕಾದರೆ, ಕರುಣಾ ಕಣ್ಗಳ ದುರ್ಗೆ ಅವಳತ್ತ ತಿರುಗಿ ಅವಳ ಮುಖವನ್ನು ಪ್ರೀತಿಯಿಂದ

ಇಸ್ರೋ ಎಂಬ ನಮ್ಮ ಹೆಮ್ಮೆ

ಗುಜರಾತ್ ನ 13,693 ಗ್ರಾಮ ಪಂಚಾಯತ್‌ಗಳನ್ನು ಇಸ್ರೋದ VSAT ಉಪಗ್ರಹಗಳ ಮೂಲಕ ಸಂಪರ್ಕ ಕಲ್ಪಿಸಿ ಅಂತರ್ಜಾಲ ಆಧರಿತ ಆಡಳಿತ ವ್ಯವಸ್ಥೆಯನ್ನು ರೂಪಿಸಲಾಗುತ್ತಿದೆ. ಅಲ್ಲದೆ ದೂರ ಶಿಕ್ಷಣ, ಟೆಲಿಮೆಡಿಸಿನ್, ಕೃಷಿಕರಿಗೆ ಸಲಹೆ ಮತ್ತು ಮಾರ್ಗದರ್ಶನದ ವ್ಯವಸ್ಥೆಯನ್ನೂ ಈ ಉಪಗ್ರಹಗಳು ನಿರ್ವಹಿಸುತ್ತಿವೆ.





ನೆಕ್ಕುತ್ತಿತ್ತು. ದಿನಕ್ಕೆ ಮೂರುಬಾರಿ ಅವಳ ಈ ಭೇಟಿ ನಡೆಯುತ್ತಿತ್ತು. ಜೊತೆಗೆ ಹಲವಾರು ದುಃಖದ ಸಂದರ್ಭಗಳಲ್ಲೂ. ತನ್ನ ಬಗೆಗೆ ಬೇಸರ ತರಿಸುವ ಮಾತುಗಳೇನಾದರೂ ಕೇಳಿಬಂದರೆ, ಅದು ನಿತ್ಯದ ಭೇಟಿಯ ಸಮಯವಲ್ಲದಿದ್ದರೂ, ಶುಭ ಈ ಗೆಳತಿಯರ ಬಳಿಗೆ ಓಡಿಬರುತ್ತಿದ್ದಳು. ಅವಳ ನೋಟದಲ್ಲೇ ಅವುಗಳಿಗೆ ಅವಳ ವೇದನೆ ಅರ್ಥವಾಗಿಬಿಡುತ್ತಿತ್ತು. ಅವಳ ಬಳಿ ಬಂದು ತಮ್ಮ ಕೊಂಬುಗಳನ್ನು ಆಕೆಯ ತೋಳುಗಳಿಗೆ ನಯವಾಗಿ ಸವರುತ್ತಾ ಅವಳನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದವು.

ಅವೆರಡೇ ಅಲ್ಲ. ಅವುಗಳೊಂದಿಗೆ ಒಂದು ಆಡು ಮತ್ತು ಬೆಕ್ಕಿನ ಮರಿಯೂ ಇದ್ದವು. ಆದರೆ ಶುಭ



ಅವುಗಳನ್ನು ಅಷ್ಟು ಹಚ್ಚಿಕೊಂಡಿರಲಿಲ್ಲ. ಅವುಗಳು ಮಾತ್ರ ಉಳಿದಿಬ್ಬರು ಸ್ನೇಹಿತೆಯರಂತೇ ಅವಳನ್ನು ಪ್ರೀತಿಸುತ್ತಿದ್ದವು. ಅವಕಾಶ ಸಿಕ್ಕಾಗಲೆಲ್ಲ ಆ ಬೆಕ್ಕಿನ ಮರಿ ಅವಳ ಮಡಿಲೇರಿ, ಮಲಗಿ ನಿದ್ರಿಸುತ್ತಿತ್ತು. ಅದಕ್ಕೊಂದು ಒತ್ತಾಸೆ ನೀಡುವಂತೆ ಶುಭ, ತನ್ನ ಮೃದು ಬೆರಳುಗಳನ್ನು ಅದರ ತಲೆಯಿಂದ ಬೆನ್ನವರೆಗೆ ಸವರುತ್ತಿದ್ದಳು.

ಶುಭಳಿಗೆ ಇನ್ನೊಬ್ಬ ಒಳ್ಳೆಯ ಗೆಣೆಕಾರನೂ ಇದ್ದ. ಅವಳಿಗೆ ಅವನೊಂದಿಗಿದ್ದ ಸಂಬಂಧ ಎಂಥದ್ದೆಂದು ಹೇಳುವುದು ಕಷ್ಟ. ಅದೇ ಊರಿನಲ್ಲಿದ್ದ ಗೋಸ್ವಾಮಿಗಳ ಕಿರಿಯ ಮಗನಾದ ಅವನ ಹೆಸರು ಪ್ರತಾಪನೆಂದು. ಎಷ್ಟೇ ಪ್ರಯತ್ನ ಮಾಡಿದರೂ ಅವನಿಗೊಂದು ಕೆಲಸ ದೊರಕಿಸಿಕೊಡಲಾಗದಿದ್ದಾಗ ಅವನ ತಂದೆ–ತಾಯಿ ಆ ಆಸೆಯನ್ನೇ ತೊರೆದಿದ್ದರು. ಕೆಲಸವಿಲ್ಲದವರೂ ಇತರರೊಂದಿಗೆ ಹೋಲಿಸಿದಾಗ ಒಂದು ರೀತಿ ಪ್ರತ್ಯೇಕತಾವಾದಿಗಳಾಗಿ ಪ್ರಸಿದ್ಧರಾಗಿಯೇ ಇರುತ್ತಾರೆ. ಅವರಿಗೆ ಬೇರೆ ಏನೂ ಕೆಲಸವಿಲ್ಲದ ಕಾರಣ ಅವರು ಸಾರ್ವಜನಿಕರ ಸೊತ್ತಾಗಿಬಿಡುತ್ತಾರೆ. ಪಟ್ಟಣದವರಿಗೆ ನಿರಾಳವಾಗಿ ಉಸಿರಾಡಲು ಒಂದು ತೆರೆದ ಸ್ಥಳ ಹೇಗೆ ಅಗತ್ಯವೋ ಹಾಗೆಯೇ ಹಳ್ಳಿಗಳಲ್ಲಿ ಹೀಗೆ ಕೆಲಸವಿಲ್ಲದ ಎರಡು ಮೂರು ಜನ ಬೇಕಾಗುತ್ತಾರೆ. ಅವರ ಪುರುಸೊತ್ತಿನಲ್ಲಿ ಇತರರಿಗೆ ಸಮಯ ನೀಡಲು, ಬೇಕೆನಿಸಿದಾಗ ಜೊತೆಗೆ ಹರಟಲು.

ಪ್ರತಾಪನ ಒಂದು ಮಹತ್ವಾಕಾಂಕ್ಷೆಯ ಕೆಲಸವೆಂದರೆ ಮೀನುಹಿಡಿಯುವುದು. ಅವನ ಹೆಚ್ಚಿನ ಸಮಯ ಹೀಗೆ ವ್ಯರ್ಥವಾಗಿ ಹೋಗುತ್ತಿತ್ತು. ಇದರಿಂದಾಗಿ ಆತ ಪ್ರತಿ ಮಧ್ಯಾಹ್ನದ ಮೇಲೆ ಕೈತುಂಬ ಕೆಲಸ ಇದ್ದವನಂತೆ ಕಾಣುತ್ತಿದ್ದ. ಹಾಗಾಗಿ ಅವನು ಶುಭಳನ್ನು ಭೇಟಿಯಾಗುವ ಸಂದರ್ಭ ಆಗಾಗ ಬರುತ್ತಿತ್ತು. ಅಲ್ಲದೆ, ಮೀನು ಹಿಡಿಯುವಾಗ ಒಬ್ಬ ಮಾತನಾಡದೇ ಮೌನಿಯಾಗಿರುವ ಸಹವರ್ತಿಯಿದ್ದರೇ ಒಳ್ಳೆಯದು. ಅವನಿಗೆ ಶುಭಳ ಮೇಲೆ ವಿಶೇಷ ಗೌರವವಿತ್ತು. ಉಳಿದವರೆಲ್ಲ ಅವಳನ್ನು ಶುಭ ಎಂದು ಕರೆಯುತ್ತಿರಬೇಕಾದರೆ, ಆತ ಮಾತ್ರ 'ಸು' ಎಂದು ಕರೆಯುವ ಮೂಲಕ ತನ್ನ ಮಮತೆಯನ್ನು ತೋರುತ್ತಿದ್ದ. ಶುಭ ಒಂದು ಹುಣಸೇ ಮರದಡಿಯಲ್ಲಿ ಕುಳಿತಿರುತ್ತಿದ್ದರೆ, ಪ್ರತಾಪನು ಅವಳಿಂದ ಸ್ವಲ್ಪ ದೂರದಲ್ಲಿ, ಆಕೆ ಅವನಿಗಾಗಿ ಮಾಡಿಕೊಟ್ಟ ವೀಳ್ಯಬಳ್ಳಿಯ ಗಾಳವನ್ನು ಹಿಡಿದು ಕೂರುತ್ತಿದ್ದ. ಅಲ್ಲಿ ದಿಗಂತದತ್ತ ದಿಟ್ಟಿಸುತ್ತಾ ಕೂತ ಶುಭ, ಪ್ರತಾಪನಿಗೆ ತಾನೇನಾದರೂ ದೊಡ್ಡ ಸಹಾಯ ಮಾಡಬೇಕೆಂದು ಆಲೋಚಿಸುತ್ತಿದ್ದಳು. ಆದರೆ ಅವಳಲ್ಲಿ ಅಂಥದ್ದೇನೂ ಇರಲಿಲ್ಲ. ಆಗ, ದೇವರಲ್ಲಿ ಕೈಮುಗಿದು, "ಅಬ್ಬ, ಸು ಇದನ್ನು ಮಾಡಿಯಾಳೆಂದು ನಾನು ಕನಸಲ್ಲೂ ಅಂದು ಕೊಂಡಿರಲಿಲ್ಲ" ಎಂದು ಪ್ರತಾಪನು ಅಂದುಕೊಳ್ಳುವ ಹಾಗಾಗುವ ಕೆಲಸವೊಂದನ್ನು ತನ್ನಿಂದ ಮಾಡಿಸ ಬೇಕೆಂದು ಬೇಡುತ್ತಿದ್ದಳು. ತಾನು ನೀರೊಳಗಿನ ರಾಣಿಯಾಗಿ ಅಲ್ಲಿ ಹಾವಿನ ತಲೆಯ ಮೇಲಿದ್ದ ಕಿರೀಟವನ್ನು ತಂದು ಪ್ರತಾಪನ ಕೈಗಿತ್ತಂತೆ, ಆಗ ಪ್ರತಾಪನು ಮೀನುಹಿಡಿಯುವುದನ್ನು ಅಲ್ಲೇ ಬಿಟ್ಟು ನೀರಿಗೆ ಧುಮುಕಿ ಅಲ್ಲಿರುವ ಆಭರಣಗಳ ನಗರದಲ್ಲಿ ಚಿನ್ನದ ಹಾಸಿಗೆ ಮೇಲೆ ಪವಡಿಸಿದ್ದ 'ಸು'ವನ್ನು ಕಂಡಂತೆ – ಹೀಗೆ ಏನೇನೋ ಕನಸುಗಳನ್ನು ಹೆಣೆಯುತ್ತಾ ಕೂರುತಿದ್ದಳು ಶುಭ. ಆದರೆ ಅದೆಲ್ಲ ಎಂದೂ ನಿಜವಾಗಲಾರದೆಂಬ ವಾಸ್ತವತೆಯ ಅರಿವೂ ಅವಳಿಗಿತ್ತು.

ಇಸ್ರೋದ ಸೂಕ್ಷ್ಮ ಸಂವೇದಿ ಉಪಗ್ರಹಗಳು ನೀಡುವ ಇನ್‌ಫ್ರಾರೆಡ್ ಇಮೇಜ್‌ಗಳ ಮೂಲಕ ಕೃಷಿಬೆಳೆಗಳು ಹೀರಿಕೊಂಡಿರುವ ನೀರಿನ ಪ್ರಮಾಣ, ಅದರಿಂದ ಬರಬಹುದಾದ ಫಲವತ್ತತೆಗಳನ್ನು ನಿರ್ಧರಿಸಬಹುದು. ಇದನ್ನು ಕಡಿಮೆ ಇಳುವರಿ ಹೊಂದಿರುವ ಪ್ರದೇಶಗಳಲ್ಲಿ ಇಳುವರಿ ಹೆಚ್ಚಿಸುವ ಪ್ರಯತ್ನದ ಸಂಶೋಧನೆಯಲ್ಲಿ ಉಪಯೋಗಿಸಲಾಗುತ್ತಿದೆ.

ಇಸ್ರೋ ಎಂಬ ನಮ್ಮ ಹೆಮ್ಮೆ